ಸಂಪುಟ 01 | ಸಂಚಿಕೆ 86 | ಸೋಮವಾರ 09 ಫೆಬ್ರವರಿ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಅಂತರರಾಷ್ಟ್ರೀಯ ದಂತ ವೈದ್ಯರ ದಿನ (International Dentist's Day)
ದಂತ ಆರೋಗ್ಯದ ಮಹತ್ವವನ್ನು ನೆನಪಿಸುವ ದಿನ.

2) ರಾಷ್ಟ್ರೀಯ ಪಿಜ್ಜಾ ದಿನ '(National Pizza Day)
ಜನಪ್ರಿಯ ಆಹಾರವಾದ ಪಿಜ್ಜಾವನ್ನು ಆಚರಿಸುವ ದಿನ.

## ಸುಭಾಷಿತ

ನಮ್ಮ ಹಣೆಬರಹ ನಿರ್ಧರಿಸುವವರು ನಾವೇ. ಅದಕ್ಕಾಗಿ ಯಾರನ್ನೂ ದೂರಬಾರದು ಅಥವಾ ಯಾರನ್ನೂ ಶ್ಲಾಘಿಸಬಾರದು.

-ಸ್ವಾಮಿ ವಿವೇಕಾನಂದ

# ನಾವು ನಂಬಿಕೆ ಇಟ್ಟಿಕೊಂಡಿದ್ದು ಮನುಷ್ಯ ಧರ್ಮ, ಮಾನವೀಯತೆ ಧರ್ಮ: ಸಿಎಂ

ನೈಜ್ಯ ದೆಸೆ ನ್ಯೂಸ್



ಹುಬ್ಬಳ್ಳಿ ತಾಲ್ಲೂಕಿನ ಶಿರಗುಪ್ಪಿ ಗ್ರಾಮದಲ್ಲಿ ಬೆಣ್ಣೆಹಳ್ಳ ಪ್ರವಾಹ ನಿಯಂತ್ರಣ ಕಾಮಗಾರಿಗೆ ಶಂಕುಸ್ಥಾಪನೆ ಮತ್ತು ನವಲಗುಂದ ವಿಧಾನಸಭಾ ಕ್ಷೇತ್ರದ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿರುವ ಅವರು, ನವಲಗುಂದ ವಿಧಾನಸಭಾ ಕ್ಷೇತ್ರದಲ್ಲಿ ಹಲವಾರು ಅಭಿವೃದ್ಧಿ ಕೆಲಸಗಳಿಗೆ ಚಾಲನೆ ನೀಡಲಾಗಿದೆ.ಅಣ್ಣಿಗೇರಿಗೆ ಯುಜಿಡಿ ಮಾಡುವ ಕುರಿತು ಬಜೆಟ್‌ನಲ್ಲಿ ಚರ್ಚಿಸಲಾಗುವುದು.ಈ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡಲು ಶ್ರಮಿಸಲಾಗುವುದು ಎಂದಿದ್ದಾರೆ.ಬೆಣ್ಣೆ ಹಳ್ಳ ಪ್ರವಾಹ ನಿಯಂತ್ರಣ ಕಾಮಗಾರಿಗೆ ಶಂಕು ಸ್ಥಾಪನೆ ನೆರವೇರಿಸಲಾಗಿದೆ. ಅಲ್ಲದೇ ವಿವಿಧ ಕಾಮಗಾರಿಗಳ ಉದ್ಘಾಟನೆ ಮಾಡಲಾಗಿದೆ. ಶಾಸಕ ಎನ್.ಎಚ್. ಕೋನರಡ್ಡಿ ನಿಷ್ಠಾವಂತ ಕೆಲಸಗಾರ, ಪ್ರಾಮಾಣಿಕ ಶಾಸಕರಾಗಿದ್ದಾರೆ. 200 ಕೋಟಿ ರೂ. ವೆಚ್ಚದಲ್ಲಿ ಬೆಣ್ಣೆಹಳ್ಳ ಯೋಜನೆಗೆ ಚಾಲನೆ ನೀಡಲಾಗಿದೆ. ಈ ಯೋಜನೆ ಪ್ರಾರಂಭಕ್ಕೆ ಶಾಸಕ ಎನ್. ಎಚ್. ಕೋನರಡ್ಡಿ ಅವರ ಒತ್ತಾಸೆ ಕಾರಣ.ಈ ಹಿಂದೆ 1610 ಕೋಟಿ ರೂ. ಅಂದಾಜು ವೆಚ್ಚದ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಆದರೆ ಕೇಂದ್ರ ಸರ್ಕಾರ ವಿಳಂಬ ಮಾಡಿದ ನಂತರ 200 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲಾಗುತ್ತಿದೆ. ಈ ಹಳ್ಳದ ಪ್ರವಾಹದಿಂದ ಸುಮಾರು 37 ಹಳ್ಳಿಗಳು ಹಾಗೂ 20 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ತೊಂದರೆ ಉಂಟಾಗುತ್ತಿತ್ತು. ಜೊತೆಗೆ 150 ಕೋಟಿ ರೂ. ವೆಚ್ಚದಲ್ಲಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಗ್ಯಾರಂಟಿ ಯೋಜನೆಯಿಂದ ರಾಜ್ಯದಲ್ಲಿ ಅಭಿವೃದ್ಧಿ ನಡೆಯುತ್ತಿಲ್ಲ ಎಂದು ಸುಳ್ಳು ಹರಡಲಾಗುತ್ತಿದೆ. ಆದರೆ ಹಲವಾರು ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ. 2018 ರಲ್ಲಿ ಸುಪ್ರೀಂ ಕೋರ್ಟ್ ಕಳಸಾ ಬಂಡೂರಿ ಯೋಜನೆಗೆ ಒಪ್ಪಿಗೆ ಸೂಚಿಸಿದೆ. ಈಗಾಗಲೇ ಕಳಸಾ ಬಂಡೂರಿ ಯೋಜನೆಗೆ ಟೆಂಡರ್ ಕರೆದು ಏಜೆನ್ಸಿಗೆ ಒಪ್ಪಿಸಲಾಗಿದೆ. ಕೇಂದ್ರ ಸರ್ಕಾರ ಅನುಮತಿ ಕೊಟ್ಟರೆ ನಾಳೆನೇ ಕಾಮಗಾರಿ ಆರಂಭಿಸಲಾಗುವುದು. ಕೇಂದ್ರ ಸರ್ಕಾರದಿಂದ ಅನುಮತಿ ದೊರೆಯಬೇಕಿದೆ. ಕೇಂದ್ರ ವನ್ಯಜೀವಿ ಮಂಡಳಿಯು ಬೇಗನೆ ಅನುಮತಿ ನೀಡಬೇಕು ಎನ್ನುವುದು ನಮ್ಮ ಒತ್ತಾಯ. ಮೂರನೇ ಹಂತದ ಕೃಷ್ಣಾ ಮೇಲ್ದಂಡೆ ಯೋಜನೆ ಕೇಂದ್ರ ಸರ್ಕಾರದಿಂದ ನಿಂತು ಹೋಗಿದೆ. ಕೇಂದ್ರ ಸರ್ಕಾರ ಕೂಡಲೇ ಗೆಜೆಟ್ ನೋಟಿಫಿಕೇಶನ್ ಮಾಡಬೇಕು. ಮೇಕೆದಾಟು ಯೋಜನೆಗೆ ಸಹ ಕೇಂದ್ರ ಸರ್ಕಾರ ಅನುಮತಿ ನೀಡಬೇಕು. ಈಗಾಗಲೇ ತಮಿಳುನಾಡು ಸಲ್ಲಿಸಿದ್ದ ಅರ್ಜಿ ವಜಾ ಆಗಿದೆ. 65 ಟಿಎಂಸಿ ಕುಡಿಯುವ ನೀರಿನ ಯೋಜನೆ ಇದಾಗಿದೆ. ಭದ್ರಾ ಮೇಲ್ದಂಡೆ ಯೋಜನೆಗೆ 5300 ಕೋಟಿ ರೂ. ಕೊಡುತ್ತೇವೆ ಎಂದು ಕೇಂದ್ರ ಸರ್ಕಾರ ಹೇಳಿತ್ತು. ಆದರೆ ಯಾವುದೇ ಹಣ ಇದುವರೆಗೂ ನೀಡಿಲ್ಲ. ರಾಷ್ಟ್ರೀಯ ಯೋಜನೆಯಾಗಿ ಮಾಡುತ್ತೇವೆ ಎಂದು ಬಣ್ಣಿಸಿದ್ದರು. ನಾವು ನಂಬಿಕೆ ಇಟ್ಟಿಕೊಂಡಿದ್ದು ಮನುಷ್ಯ ಧರ್ಮದಲ್ಲಿ 2005 ರಲ್ಲಿ ಮನರೇಗಾ ಯೋಜನೆ ಜಾರಿ ಮಾಡಲಾಗಿತ್ತು. ಆದರೆ ಕೇಂದ್ರ ಸರ್ಕಾರ ಕಳೆದ ಡಿಸೆಂಬರ್ ನಲ್ಲಿ ಈ ಯೋಜನೆಯನ್ನು ರದ್ದು ಮಾಡಿದೆ. ಈ ಮೂಲಕ ಯುವಕರಿಗೆ, ಮಹಿಳೆಯರಿಗೆ, ಕೆಲಸವಿಲ್ಲದವರಿಗೆ ಕೆಲಸ ಕೊಡುವ ಯೋಜನೆಯನ್ನು ಕೈ ಬಿಡಲಾಗಿದೆ. ನಾವು ನಂಬಿಕೆ ಇಟ್ಟಿಕೊಂಡಿದ್ದು ಮನುಷ್ಯ ಧರ್ಮ, ಮಾನವೀಯತೆ ಧರ್ಮ. ಬಸವಣ್ಣನವರು ಇವನಾರವ ಇವನಾರವ ಎಂದೆನಿಸದಿರಯ್ಯ, ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯಾ... ಎಂದು ಹೇಳಿದ್ದಾರೆ.ಸುಮಾರು 1.16 ಲಕ್ಷ ಕೋಟಿ ಹಣವನ್ನು ಗ್ಯಾರಂಟಿ ಯೋಜನೆಗೆ ವ್ಯಯಿಸಲಾಗಿದೆ. ಪ್ರತಿ ಕುಟಂಬಕ್ಕೆ 4-5 ಸಾವಿರ ಪ್ರತಿ ತಿಂಗಳು ನೀಡಲಾಗುತ್ತಿದೆ. ವರ್ಷಕ್ಕೆ 50 ಸಾವಿರ ಹಣ ನೇರವಾಗಿ ಮುಟ್ಟಲಿದೆ. ಸುಮಾರು 25 ಸಾವಿರ ಕೋಟಿ ನೀರಾವರಿಗೆ ಖರ್ಚು ಮಾಡಲಾಗಿದೆ. 4.5 ಲಕ್ಷ ಕೋಟಿಗೂ ಹೆಚ್ಚು ಹಣ ಕೇಂದ್ರಕ್ಕೆ ಕೊಡುತ್ತಿದ್ದೇವೆ. ಆದರೆ ಕೇಂದ್ರದಿಂದ 60 ಸಾವಿರ ಕೋಟಿ ಮಾತ್ರ ರಾಜ್ಯಕ್ಕೆ ಮರಳುತ್ತಿದೆ. ಮನರೇಗಾ ಯೋಜನೆಯನ್ನು ಮರುಸ್ಥಾಪನೆ ಮಾಡುವ ನಿಟ್ಟಿನಲ್ಲಿ ಹೋರಾಟ ಮಾಡುತ್ತೇವೆ. ಮನರೇಗಾ ಅಡಿ ಕೆಲಸ ಮಾಡುತ್ತಿದ್ದವರಲ್ಲಿ ಶೇ. 53 ಮಹಿಳೆಯರು, ಶೇ.17 ರಷ್ಟು ಪರಿಶಿಷ್ಟ ಜಾತಿ ಹಾಗೂ ಶೇ. 11ರಷ್ಟು ಪರಿಶಿಷ್ಟ ಪಂಗಡ ವರ್ಗದವರಿದ್ದಾರೆ. ಇವರೆಲ್ಲರೂ ವಿಬಿ ಜಿ ರಾಮ್ ಜಿ ಇಂದ ಕೆಲಸ ಕಳೆದುಕೊಳ್ಳಲಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದ್ದಾರೆ.

## ರಾಷ್ಟ್ರೀಯ ಆರೋಗ್ಯ ಜಾಗೃತಿ ಕಾರ್ಯಕ್ರಮ.

ನೈಜ್ಯ ದೆಸೆ ನ್ಯೂಸ್

ಸಿಂಧನೂರು : ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಸಮನ್ವಯ ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಟ್ರಸ್ಟ್ ಸಂತೆಕಲ್ಲೂರು ರಾಯಚೂರು ಹಾಗೂ ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರ್ ಇವರ ವತಿಯಿಂದ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಕುರಿತು ಸಿಂಧನೂರು ನಗರದ ಬಸ್ ನಿಲ್ದಾಣದಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಬೀದಿ ನಾಟಕಗಳ ಪ್ರದರ್ಶನದ ಮೂಲಕ ಆರೋಗ್ಯದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು ಅನೇಕ ರೋಗಗಳು ಹರಡುವುದು ತಡೆಗಟ್ಟುವುದು ಚಿಕಿತ್ಸೆ ಪಡೆದುಕೊಳ್ಳುವುದು ಹೇಗೆ ಎಂಬುದರ ಬಗ್ಗೆ ಕಲಾಪ್ರದರ್ಶನದ ಮೂಲಕ ಸಾರ್ವಜನಿಕರಿಗೆ ತಿಳಿಸಿ ಅದಾಗಿಯೂ ವಿವಿಧ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಲ್ಲಿ ಡಾ, ಪುನೀತ ರಾಜಕುಮಾರ್ ಹೃದಯ ಜ್ಯೋತಿ ಯೋಜನೆ ಕುರಿತು ಸಾರ್ವಜನಿಕರಲ್ಲಿ ಹೆಚ್ಚುತ್ತಿರುವ ಹೃದಘಾತಗಳಿಗೆ ಸಂಬಂಧಪಟ್ಟ ಚಿಕಿತ್ಸೆ ಹೇಳಲಾಯಿತು, ಎಚ್ಐವಿ ಮತ್ತು ಏಡ್ಸ್ ಕುರಿತು ಗರ್ಭಿಣಿ, ಗಂಡಾಂತರ ಗರ್ಭಿಣಿಯರ ಬಗ್ಗೆ ಕ್ಷಯ ರೋಗದ ಕುರಿತು ಸಾಂಕ್ರಾಮಿಕ ರೋಗಗಳ ಬಗ್ಗೆ ರಕ್ತ ಹೀನತೆಯ ಬಗ್ಗೆ ಚಿಕಿತ್ಸೆ ಪಡೆದುಕೊಳ್ಳುವುದರ ಸದರಿ ಶ್ರೀಮತಿ ಗೀತಾ ಃಊಇಔ ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರು, ಕಾರ್ಯಕ್ರಮದಲ್ಲಿ ಸಮನ್ವಯ ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಟ್ರಸ್ಟ್ ರಿ, ಸಂತೆಕೇಲ್ಲೂರು ಕಲಾತಂಡದ ಮುಖ್ಯಸ್ಥರು ಉಮಾಪತಿ ಕನ್ನಾರಿ, ನಾಗಯ್ಯ ಸ್ವಾಮಿ, ಬೆಟ್ಟಪ್ಪ, ಬಸವರಾಜ್, ನಿರೂಪದಿ ನಾಯಕ್, ವಿರೂಪಾಕ್ಷ, ಮಮತಮ್ಮ, ಗೌರಮ್ಮ, ಸರಸ್ವತಿ, ಅನುಪಮಾ, ಆಶಾ ಕಾರ್ಯಕರ್ತೆಯರು, ಬಸ್ ಡಿಪೋ ಸಿಬ್ಬಂದಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.




ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ 9902277588

# ಹುಸೇನ್ ಬಾಷಾ ಅವರ ತಿಪ್ಪನಹಟ್ಟಿ ನಕ್ಷತ್ರಗಳು ತಂಡ ಚಾಂಪಿಯನ್ಸ್







ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಪಗಡದಿನ್ನಿ ಗ್ರಾಮ ಪಂಚಾಯತಿ ಪ್ರೀಮಿಯರ್ ಲೀಗ್ ಸೀಸನ್ 1 ಕುನ್ನಟಗಿ ವತಿಯಿಂದ ಆಯೋಜಿಸಲಾಗಿದ್ದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಹುಸೇನ್ ಬಾಷಾ ಅವರ ತಿಪ್ಪನಹಟ್ಟಿ ನಕ್ಷತ್ರಗಳು ತಂಡ ಅದ್ಭುತ ಪ್ರದರ್ಶನ ನೀಡಿ ಪ್ರಥಮ ಸ್ಥಾನ ಪಡೆದು ಚಾಂಪಿಯನ್ಸ್ ಆಗಿ ಹೊರಹೊಮ್ಮಿದೆ. ಟೂರ್ನಮೆಂಟ್‌ನಾದ್ಯಂತ ಶಿಸ್ತಿನ ಆಟ, ತಂಡಭಾವನೆ ಮತ್ತು ಸಮರ್ಪಿತ ಪ್ರಯತ್ನಗಳ ಮೂಲಕ ಎದುರಾಳಿ ತಂಡಗಳನ್ನು ಮಣಿಸಿದ ತಿಪ್ಪನಹಟ್ಟಿ ನಕ್ಷತ್ರಗಳು ಫೈನಲ್ ಪಂದ್ಯದಲ್ಲಿಯೂ ಶ್ಲಾಘನೀಯ ಪ್ರದರ್ಶನ ನೀಡಿ ಪ್ರೇಕ್ಷಕರ ಮನ ಗೆದ್ದಿತು.ಈ ಸಾಧನೆಯ ಕುರಿತು ತಂಡದ ಮಾಲೀಕರಾದ ಹುಸೇನ್ ಬಾಷಾ ಅವರು ಮಾತನಾಡಿ, "ತಂಡದ ಪ್ರತಿಯೊಬ್ಬ ಆಟಗಾರ ಹಾಗೂ ನಾಯಕನ ಅಕ್ಷರಶಃ ಪರಿಶ್ರಮ, ಶಿಸ್ತು ಮತ್ತು ಏಕತೆ ಫಲವಾಗಿ ಈ ಗೆಲುವು ಸಾಧ್ಯವಾಗಿದೆ" ಎಂದು ತಿಳಿಸಿ ಎಲ್ಲಾ ಆಟಗಾರರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು.ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ಸೈಯದ್ ಹಾರೂನ್ ಸಾಹೇಬ್ ಜಾಗೀರ್ದಾರ ಅವರು ತಂಡದ ಸಾಧನೆಯನ್ನು ಶ್ಲಾಘಿಸಿ ಅಭಿನಂದನೆ ಸಲ್ಲಿಸಿದರು.ತಂಡದ ನಾಯಕ ಹನುಮಂತ ಅವರ ನಾಯಕತ್ವದಲ್ಲಿ ಆಟಗಾರರಾದ ಭೀಮರಾಯ, ಬಸವರಾಜ, ಪ್ರಮೋದ್, ಮಲ್ಲಪ್ಪ, ಮಲ್ಲಪ್ಪ (ಜೆಡಿ-ಎಸ್), ನಿರುಪಾದಿ, ಮಿಯಾಜ್, ಸೋಮು ನಾಯಕ, ಖಾನ್ ಎಸ್, ಮಲ್ಲು ಎಸ್, ದೇವರಾಜ, ಸದ್ದಾಂ ಸೇರಿದಂತೆ ಎಲ್ಲ ಆಟಗಾರರು ಉತ್ತಮ ಆಟವಾಡಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.ಈ ಐತಿಹಾಸಿಕ ಸಾಧನೆಯ ಹಿನ್ನೆಲೆಯಲ್ಲಿ ತಿಪ್ಪನಹಟ್ಟಿ ಗ್ರಾಮಸ್ಥರು ಹುಸೇನ್ ಬಾಷಾ ಅವರಿಗೆ ಹಾಗೂ ಎಲ್ಲಾ ತಂಡದ ಆಟಗಾರರಿಗೆ ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸಿ, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡುವಂತೆ ಹಾರೈಸಿದರು.






# ಒಳಬಳ್ಳಾರಿ ಗ್ರಾಮ ಪಂಚಾಯತಿ ಕಟ್ಟಡ ಉದ್ಘಾಟನೆ ನಾಮಫಲಕಕ್ಕೆ ಬಟ್ಟೆ ಕಟ್ಟಿ ಮುಚ್ಚಿದ ಅಧಿಕಾರಿಗಳು ಆರೋಪ

ನೈಜ್ಯ ದೆಸೆ ನ್ಯೂಸ್

ತಾಲೂಕಿನ ಒಳಬಳ್ಳಾರಿ ಗ್ರಾಮ ಪಂಚಾಯತಿ ನೂತನ ಕಟ್ಟಡ ಉದ್ಘಾಟನೆಗೆ ಶಾಸಕ ಹಂಪನಗೌಡ ಬಾದರ್ಲಿ ಅವರನ್ನು ಕೇಳಿ ದಿನಾಂಕ ನಿಗದಿ ಮಾಡಲಾಗಿತ್ತು ಆದರೆ ಶಾಸಕರು, ತಾಲೂಕು ಪಂಚಾಯತ ಇಒ ಚಂದ್ರಶೇಖರ, ಪಿಡಿಒ ಬಸವರಾಜ ಸೂಡಿ, ಕಾರ್ಯಕ್ರಮಕ್ಕೆ ಬಾರದೆ ನಿರ್ಲಕ್ಷ್ಯ ಮಾಡಿದ್ದು, ಪಂಚಾಯತಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಎಸ್.ಸಿ, ಎಸ್.ಟಿ ಸಮುದಾಯಕ್ಕೆ ಸೇರಿದವರು ಎಂಬ ಕಾರಣಕ್ಕೆ ಇವರು ಬಂದಿಲ್ಲ ಎಂದು ನಿಕಟ ಪೂರ್ವ ಅಧ್ಯಕ್ಷೆ ಮೂಕಾಂಬಿಕಾ ಗಂ ಭೀಮಣ್ಣ ನಾಯಕ ಆರೋಪ ಮಾಡಿದರು.ರವಿವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಈಥರ ಅವಮಾನ ನಮಗೆ ಇದು ಮೂರನೇ ಸಲ ಬಂಗಾಲಿ ಕ್ಯಾಂಪ್,ಅಂಬಾಮಠದಲ್ಲಿನ ಮುಖ್ಯಮಂತ್ರಿಗಳ ಕಾರ್ಯಕ್ರಮ ಹೀಗೆ ಮೂರು ಸಾರಿ ನಮ್ಮನ್ನು ನಿರ್ಲಕ್ಷ್ಯ ಮಾಡಿದ್ದಾರೆ.ಶಾಸಕರನ್ನು ಕೇಳಿಯೇ ನಾವು ದಿನಾಂಕವನ್ನು ನಿಗದಿ ಮಾಡಿದ ಮೇಲೆಯೂ ಬಾರದೆ ಇರುವುದಕ್ಕೆ ಕಾರಣ ಏನು? ಶಾಸಕರು, ಇಒ ಚಂದ್ರಶೇಖರ, ಪಿಡಿಒ ಬಂದಿಲ್ಲ ಮತ್ತು ಉದ್ಘಾಟಿಸಿದ ನಾಮಫಲಕವನ್ನು ಸಹ ಕಿತ್ತಲು ಪ್ರಯತ್ನ ಮಾಡಿದರು. ಆ ಪ್ರಯತ್ನ ಸಫಲ ಆಗಲಿಲ್ಲ ನಾಮ ಫಲಕಕ್ಕೆ ಈಗ ಬಟ್ಟೆ ಮುಚ್ಚಿದ್ದಾರೆ.ನಮ್ಮಿಂದ ಉದ್ಘಾಟನೆ ಮಾಡಿದ್ದು ಇವರಿಗೆ ಇಷ್ಟವೆ ಇದ್ದಂತಿಲ್ಲ! ಈಗಲೂ ಇಒ ಚಂದ್ರಶೇಖರ, ಪಿಡಿಒ ಬಸವರಾಜ ಸೂಡಿ, ಅಧಿಕಾರಿಗಳಂತಿರದೆ ಶಾಸಕರ ಹಿಂಬಾಲಕರಂತೆ ವರ್ತನೆ ಮಾಡುತ್ತಿದಗದಾರೆಂದು




ಅಧಿಕಾರಿಗಳ ಮೇಲೆ ಆರೋಪ ಮಾಡಿದರು. ಶ್ರೀ ದೇವಿ ಶ್ರೀನಿವಾಸ ಅವರು ಪ್ರತಿಯೊಂದು ಕಾರ್ಯಕ್ರಮದಲ್ಲಿ ಶಾಸಕ ಹಂಪನಗೌಡ ಬಾದರ್ಲಿಯವರ ಜೊತೆಯಲ್ಲಿ ವೇದಿಕೆ ಹಂಚಿಕೊಂಡು ಪಕ್ಕದಲ್ಲಿ ಕುಳಿತುಕೊಳ್ಳುತ್ತಾರೆ ಇದು ಶಿಷ್ಟಾಚಾರವೇ ? ಜೊತೆಗೆ ಪತ್ರಿಕಾಗೋಷ್ಠಿಯನ್ನು ನಡೆಸದಂತೆ ನಮಗೆ ಪಿಡಿಒ ಬಸವರಾಜ ಸೂಡಿ ಒತ್ತಡ ಹಾಕಲು ಯತ್ನಿಸುತ್ತಿದ್ದಾನೆ. ಕಳೆದ 7 ವರ್ಷಗಳಿಂದಲೂ ಒಳಬಳ್ಳಾರಿ ಗ್ರಾಮ ಪಂಚಾಯತಿಯನ್ನು ಹಳೆಯದಾದ ಗೊಡಾನ್, ಶಾಲಾ ಕಟ್ಟಡದಲ್ಲಿ ನಡೆಸಲಾಗಿತ್ತು. ನಾವುಮುತುವರ್ಜಿಯಿಂದ ನರೇಗಾ ಯೋಜನೆ ಅಡಿಯಲ್ಲಿ 18 ಲಕ್ಷ ವೆಚ್ಚದಲ್ಲಿ ಕಟ್ಟಡ ಕಾಮಗಾರಿ ಮುಗಿಸಿದ್ದೆವೆ. ಮತ್ತು 5 ವರ್ಷಗಳ ಹಿಂದೆಯೇ 14 ಲಕ್ಷ ಹಣಬಂದಿದೆ ಅದನ್ನು ಯಾರಿಗೂ ಕೂಡ ತಿಳಿಯದಂತೆ ಮುಚ್ಚಿಟ್ಟಿದ್ದು ಯಾಕೆ? ಎಂಬ ಪ್ರಶ್ನೆ ಉದ್ಭವವಾಗಿದೆ. ಉದ್ಘಾಟನೆ ಮಾಡುವ ಪೂರ್ವವಾಗಿ ವಿಶೇಷ ಸಭೆ ನಡೆಸಿ, ಕಾರ್ಯಕ್ರಮ ಕುರಿತು ಸೂಚಿಸಲಾಗಿತ್ತು. 17 ಜನರ ಗ್ರಾಮ ಪಂಚಾಯತಿ ಸದಸ್ಯರಲ್ಲಿ 12 ಜನರು ಈ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸದಸ್ಯ ಬಸಲಿಂಗಯ್ಯ ಮಾತನಾಡಿ ಪಂಚಾಯತಿ ಕಟ್ಟಡಕ್ಕೆ ತಲಾ 4 ಲಕ್ಷ ರೂ.ನಂತೆ ನಮ್ಮ ಕೈಯಿಂದಲೆ ಖರ್ಚು ಮಾಡಿ, ಕಟ್ಟಡ ಕಾಮಗಾರಿ ಮುಗಿಸಿದ್ದೇವೆ ಎಂದರು.ಈ ವೇಳೆ: ಗ್ರಾಮ ಪಂಚಾಯತಿ ಸದಸ್ಯ ರಂಗನಾಥ, ಬಿಜೆಪಿ ಪಕ್ಷದ ಗ್ರಾಮೀಣ ಮಂಡಲ ಅಧ್ಯಕ್ಷರಾದ ಯಂಕೋಬ ರಾಮತ್ನಾಳ್, ಮುಖಂಡ ಆದಿಮನಿ ಪರಮೇಶ, ಭೀಮಣ್ಣ, ಸೇರಿದಂತೆ ಅನೇಕರಿದ್ದರು.

## ಸಾಹಿತ್ಯ ಸಿಂಚನ

ಏಳು ವರ್ಷಗಳ ಹಿಂದೆ
ಒಂದು ನೋಟದಲ್ಲಿ ಶುರುವಾಯಿತು,
ನಿನ್ನ ಕೈಯಲ್ಲಿ ನನ್ನ ಭವಿಷ್ಯ
ನಿಶ್ಚಯವಾಗಿ ಬಂಧವಾಯಿತು.
ಹಾದಿ ಕಠಿಣವಾದರೂ
ನಿನ್ನ ಜೊತೆಯಿದ್ದಾಗ ಸುಲಭವಾಯಿತು,
ಬಿರುಗಾಳಿಯ ನಡುವೆ ಕೂಡ
ನಮ್ಮ ಪ್ರೀತಿ ದೀಪವಾಗಿ ಬೆಳಗಿತು.
ಕಣ್ಣೀರಲ್ಲಿ ಧೈರ್ಯ ಕಂಡೆ,
ನಿನ್ನ ನಗುವಲ್ಲಿ ಬದುಕು ಕಂಡೆ,
ನೋವಿನ ಕ್ಷಣದಲ್ಲೂ
ನಿನ್ನ ಪ್ರೀತಿಯ ಸ್ಪರ್ಶ ಕಂಡೆ.
ಕಾಲವು ದೂರ ಸರಿದರೂ
ಹೃದಯಗಳು ಹತ್ತಿರವಾಯಿತು,
ವರ್ಷಗಳು ಹರಿದರೂ
ನಮ್ಮ ನಂಟು ಗಟ್ಟಿಯಾಗಿತು.
ನಿನ್ನೊಂದಿಗೆ ಪ್ರತಿ ಬೆಳಗು,
ನಿನ್ನೊಂದಿಗೆ ಪ್ರತಿ ಸಂಜೆ,
ನಿನ್ನೇ ನನ್ನ ಪ್ರಾರ್ಥನೆ,
ನಿನ್ನೇ ನನ್ನ ಜೀವದ ಸಂಗಾತಿ.
ಜನ್ಮ ಜನ್ಮಾಂತರವೂ
ಈ ಪ್ರೀತಿ ಹಸಿರಾಗಿರಲಿ,
ನಮ್ಮ ಕಥೆ ಲೋಕಕ್ಕೆ
ಅಮರ ಕಾವ್ಯವಾಗಿರಲಿ.

ಸುಜಾತಾ ಎನ್


# ಒಳ್ಳೆಯ ನಾಗರಿಕರಾಗಲು ಪ್ರಯತ್ನಿಸಿ: ಶಾಸಕ ನಾಡಗೌಡ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ನಿಮಗೆ ಒಳ್ಳೆಯ ಶಿಕ್ಷಣವನ್ನು ನೀಡಿ ನಿಮ್ಮ ಭವಿಷ್ಯವನ್ನು ಉಜ್ವಲ ಗೊಳಿಸಲು ಹೆತ್ತವರು ಹಗಲಿರಳು ಕಷ್ಟ ಪಡುತ್ತಾರೆ ಅವರ ನಿರೀಕ್ಷೆಗಳನ್ನು ಹುಸಿಗೊಳಿಸಬೇಡಿ ಜೀವನದಲ್ಲಿ ನಿರಂತರ ಪ್ರಯತ್ನದಿಂದ ಶ್ರೇಷ್ಠ ಸಾಧನೆಯನ್ನು ಮಾಡುವಂತವರಾಗಿ ಎಂದು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ, ಶಾಸಕ ಅಪ್ಪಾಜಿ ನಾಡಗೌಡರು ಹೇಳಿದರು. ರವಿವಾರ ಪಟ್ಟಣದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಿರ್ಮಾಣಗೊಂಡಿರುವ ಶ್ರೀ ಡಿ.ದೇವರಾಜ ಅರಸು ಮೆಟ್ರಿಕ್ ನಂತರ ಬಾಲಕಿಂ–ಯರ ವಸತಿ ನಿಲಯದ ನೂತನ ಕಟ್ಟಡವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸುಮಾರು 240.80 ಲಕ್ಷ ಮೊತ್ತದಲ್ಲಿ ನಿರ್ಮಾಣವಾಗಿರುವ ಈ ವಸತಿ ನಿಲಯದಲ್ಲಿ 100 ವಿದ್ಯಾರ್ಥಿನೀಯರು ಇರುವಷ್ಟು ಸೌಲಭ್ಯವಿದೆ. ಈ ಮೊದಲು




ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿರುವ ಈ ವಸತಿ ನಿಲಯವನ್ನು ಆದಷ್ಟು ಬೇಗ ಇಲ್ಲಿಗೆ ಸ್ಥಳಾಂತರ ಮಾಡಲಾಗುವುದು ವಿದ್ಯಾರ್ಥಿನಿಯರು ಈ ಕಟ್ಟಡದ ಸ್ವಚ್ಛತೆಯನ್ನು ಕಾಯ್ದುಕೊಳ್ಳಬೇಕು. ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಂಡು ಕಠಿಣ ಪರಿಶ್ರಮದಿಂದ ಅಧ್ಯಯನ ಮಾಡಿ ಶ್ರೇಷ್ಠ ಸಾಧನೆ ಮಾಡುವಂತವರಾಗಬೇಕು, ಪಾಠದೊಂದಿಗೆ ಕ್ರೀಡೆಗೂ ಮಹತ್ವ ನೀಡಬೇಕು ಇಲ್ಲಿ ಸಣ್ಣಪುಟ್ಟ ಕ್ರೀಡೆಗಳನ್ನಾಡಲು ಸ್ಥಳಾವಕಾಶ ಇದೆ ಇದರ ಸದುಪಯೋಗ ಮಾಡಿಕೊಂಡು ಒಳ್ಳೆಯ ಕ್ರೀಡಾ ಪಟುಗಳಾಗಲೂ ಪ್ರಯತ್ನಿಸಿ ಎಂದರು. ಇದೇ ಸಂದರ್ಭದಲ್ಲಿ ನೂತನ ವಸತಿ ನಿಲಯದ ಕಟ್ಟಡ ನಿರ್ಮಾಣ ಮಾಡಿದ ಕೆ ಆರ್ ಐ ಡಿ ಎಲ್ ಇಲಾಖೆಯ ಅಧಿಕಾರಿ ಬಸವರಾಜ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಶಿವಲೀಲಾ ಕೊಣ್ಣೂರ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಮುಸ್ಲಿಂ ಧಾರ್ಮಿಕ ಮುಖಂಡ ಸೈಯದ್ ಶಕೀಲ ಅಹ್ಮದ್ ಖಾಜಿ, ಪುರಸಭೆ ಮಾಜಿ ಸದಸ್ಯ ಪ್ರಭುಗೌಡ ಮದರಕಲ್ಲ, ಸಂಗನಗೌಡ ಅಸ್ಕಿ, ಪಿಎ ಜ್ಯೋತಿ ಖೋತ, ನಿಲಯ ಮೇಲ್ವಿಚಾರಕಿ ಶಹನಾಜ ಮುದ್ದೇಬಿಹಾಳ, ನಿಲಯ ಪಾಲಕರಾದ ಐ.ಎಸ್.ಮೊರ್ಕಿ,ಎಚ್.ಎಸ್.ಬಾದವಾಡಗಿ, ಮುದ್ದೇಬಿಹಾಳ ನಿಲಯ ಮೇಲ್ವಿಚಾರಕ ಅಡಿವೆಪ್ಪ ಸೌಕಾರ, ಸಿಬ್ಬಂದಿಗಳಾದ ಯಲ್ಲಾಲಿಂಗ ಹೊಸಮನಿ, ಸಂಗಮೇಶ ಬಳಿಗಾರ, ಜ್ಯೋತಿ ಚೌದರಿ, ಅಂಬಾವತಿ ಹೊಸಮನಿ, ಗಂಗಾರಾಮ ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.



# ಎಡದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದಲ್ಲಿ ಮಕ್ಕಳ ಕಲರವದಿಂದ ಕೂಡಿದ ಆರೋಗ್ಯ ಇಲಾಖೆ ವಸ್ತು ಪ್ರದರ್ಶನ ಮಳಿಗೆ.

ನೈಜ್ಯ ದೆಸೆ ನ್ಯೂಸ್

ಜಿಲ್ಲಾಡಳಿತದ ಅಡಿಯಲ್ಲಿ ಮೂರು ದಿನಗಳ ಕಾಲ ವಿಜೃಂಬಣೆಯಿಂದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ಜರುಗಿದ ಜಿಲ್ಲೆಯ ಹೆಮ್ಮೆಯ ಎಡದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಐಇಸಿ ವಿಭಾಗದಿಂದ ಸಿದ್ದಪಡಿಸಿದ ಆರೋಗ್ಯ ಜಾಗೃತಿ ವಸ್ತುಪ್ರದರ್ಶನ ಮಳಿಗೆಯಲ್ಲಿ ಹದಿಹರೆಯದ ಆರೋಗ್ಯ ಸಮಸ್ಯೆಗಳು, ಬಾಲ್ಯದಲ್ಲಿ ತಟಗಟ್ಟಬಹುದಾದ ಮಾರಕ ರೋಗಗಳ ತಡೆಗೆ ಇರುವ ಲಸಿಕೆಗಳ ಜಾಗೃತಿಗಾಗಿ ಗೊಂಬೆಗಳು, ಕಿಲ್‌ಕಾರಿ ಮೊಬೈಲ್ ರೈಲ್ವೆ ಮಾದರಿ, ಆಸ್ಪತ್ರೆ, ಶಾಲೆಯ ಮಾದರಿ, ಪೌಷ್ಟಿಕ ಆಹಾರ ಸೇವನೆಯ ಪಿರಾಮಿಡ್, ನಮ್ಮ ಕ್ಲಿನಿಕ್, ಹೆಣ್ಣು ಮಗು ಉಳಿಸಿ, ತಾಯಿ ಹಾಲು ಅಮೃತವೆಂಬ ಅಡಿಬರದ ಆಕರ್ಷಕ ಮಾದರಿಗಳು, ಬಾಲ್ಯ ವಿವಾಹ ತಡೆ, ಊಟದ ಮೊದಲು ಶೌಚದ ನಂತರ ಕೈ ತೊಳೆಯುವಿಕೆ, ಡೆಂಗ್ಯು ಆಶಾಕಿರಣ ಫಲಕಗಳು, ಎನ್‌ಸಿಡಿಯಡಿ ಸಿಗರೇಟ್ ಸೇವನೆಯ ದುಷ್ಪರಿಣಾಮ, ಶ್ವಾಸಕೋಶದ ಮಾದರಿ ಮುಂತಾದವು ಉತ್ಸವಕ್ಕೆ ಆಗಮಿಸಿದ್ದ ಮಕ್ಕಳ ಮನಸ್ಸನ್ನು ಸೆಳೆಯುವ ಜೊತೆಗೆ ಆರೋಗ್ಯದ




ಕುರಿತು ಕೂತುಹಲದ ಪ್ರಶ್ನೆಗಳನ್ನು ಉತ್ತರ ಪಡೆದುಕೊಂಡು ಸಂತಸದಿಂದ ತೆರಳುತ್ತಿದ್ದುದು ಎಲ್ಲರಿಗೂ ಹೆಮ್ಮೆಯನಿಸಿತು. ಅಲ್ಲದೆ ಪಾಲಕರು ಅಂಗಾಂಗ ದಾನದ ಸೇಲ್ಪಿ ಸ್ಟ್ಯಾಂಡ್‌ನಲ್ಲಿ ಕುಟುಂಬ ಸಮೇತ ಪೋಟೊ ಕ್ಲಿಕ್ಕಿಸಿಕೊಂಡು ಅಭಿಯಾನಕ್ಕೆ ಬೆಂಬಲ ನೀಡಿದರು. ಮನರಂಜನೆ ಒಂದು ಕಡೆಯಾದರೆ ಮಕ್ಕಳ ಆರೋಗ್ಯದ ಸುರಕ್ಷತೆಗೆ ಜಾಗೃತಿಯು ಸಂತಸ ತಂದಿದೆ ಎಂದು ಪಾಲಕರು ಅಭಿಪ್ರಾಯ ಹಂಚಿಕೊಂಡು ಜಿಲ್ಲಾಡಳಿತಕ್ಕೆ ಜಿಲ್ಲಾ ಪಂಚಾಯತಗೆ ಆರೋಗ್ಯ ಇಲಾಖೆಗೆ ಧನ್ಯವಾದ ತಿಳಿಸಿದ್ದು ಉತ್ಸವದಲ್ಲಿ ಇದಕ್ಕೆ ಅವಕಾಶ ಮಾಡಿದ ಜಿಲ್ಲೆಯ ಸಚಿವರು, ಜನಪ್ರತಿನಿಧಿಗಳು, ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಮಹಾನಗರ ಪಾಲಿಕೆ ಆಯುಕ್ತ–ರಿಗೆ ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಧನ್ಯವಾದಗಳನ್ನು ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರಬಾಬು ತಿಳಿಸಿದ್ದಾರೆ.

## ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಯಚೂರು ಜಿಲ್ಲಾಯುವ ಘಟಕ ಅಧ್ಯಕ್ಷರಾಗಿ ಸುರೇಶ ಸಂಗಾಪುರ ಅವರು ಅವಿರೋಧವಾಗಿ ಆಯ್ಕೆ

ನೈಜ್ಯ ದೆಸೆ ನ್ಯೂಸ್



ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಯಚೂರು ಜಿಲ್ಲಾಯುವ ಘಟಕ ಅಧ್ಯಕ್ಷರಾಗಿ ಸುರೇಶ ಸಂಗಾಪುರ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಪಸ್ಥಿತ–ರಿದ್ದ ರಾಜ್ಯ ಪ್ರಧಾನ ಕಾರ್ಯದರ್ಶಿ ಬ್ರಹ್ಮ ಗಣೇಶ್. ರಾಯಚೂರು ಜಿಲ್ಲಾ ವಿಶ್ವಕರ್ಮ ಸಮಾಜ ಪ್ರಧಾನ ಕಾರ್ಯದರ್ಶಿ ರಾಮು ಗಾಣದಾಳ ಅವರ ನೇತೃತ್ವದಲ್ಲಿ ಮತ್ತು ಹಿರಿಯ ವಿಶ್ವಕರ್ಮ ಮುಖಂಡರು ಯುವ ಘಟಕ ವಿಶ್ವಕರ್ಮ ಸದಸ್ಯರೊಂದಿಗೆ ರಾಯಚೂರು ಜಿಲ್ಲೆ ಕಾಳಿಕಾದೇವಿ ದೇವಸ್ಥಾನದಲ್ಲಿ ಜರುಗಿತು

## ಕೆ.ಆರ್.ಐ.ಡಿ.ಎಲ್. ಇಲಾಖೆಯ ಅಧಿಕಾರಿ ಬಸವರಾಜ ಇವರನ್ನು ಸನ್ಮಾನ

ನೈಜ್ಯ ದೆಸೆ ನ್ಯೂಸ್



ತಾಳಿಕೋಟಿ : ಪಟ್ಟಣದಲ್ಲಿ ರವಿವಾರ ಹಮ್ಮಿಕೊಂಡಿದ್ದ ನೂತನ ವಸತಿ ನಿಲಯದ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಶಾಸಕ ಅಪ್ಪಾಜಿ ನಾಡಗೌಡರು ಕೆ.ಆರ್.ಐ.ಡಿ.ಎಲ್. ಇಲಾಖೆಯ ಅಧಿಕಾರಿ ಬಸವರಾಜ ಇವರನ್ನು ಸನ್ಮಾನಿಸಿದರು. ಮುಸ್ಲಿಂ ಧಾರ್ಮಿಕ ಮುಖಂಡ ಸೈಯದ್ ಶಕೀಲ ಅಹ್ಮದ್ ಖಾಜಿ, ಪುರಸಭೆ ಮಾಜಿ ಸದಸ್ಯ ಪ್ರಭುಗೌಡ ಮದರಕಲ್ಲ, ಹಿಂ.ವ.ಕ.ಇಲಾಖೆಯ ಅಧಿಕಾರಿ ಶಿವಲೀಲಾ ಕೊಣ್ಣೂರ,ಪಿಎ ಜ್ಯೋತಿ ಖೋತ್, ಯುವ ಮುಖಂಡ ಸಂಗನಗೌಡ ಅಸ್ಕಿ ಹಾಗೂ ಸಿಬ್ಬಂದಿಗಳು ಇದ್ದರು.

# ಕೆ ಆರ್ ಎಸ್ ಪಕ್ಷದ ರಾಜ್ಯ ರೈತ ಘಟಕದಿಂದ ಚಳ್ಳಕೆರೆಯಲ್ಲಿ ರೈತ ಚೈತನ್ಯ ಯಾತ್ರೆ.

ನೈಜ್ಯ ದೆಸೆ ನ್ಯೂಸ್

ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ರಾಜ್ಯ ರೈತ ಘಟಕ ಹಾಗೂ ಚಿತ್ರದುರ್ಗ ಜಿಲ್ಲ ಚಳ್ಳಕೆರೆ ತಾಲೂಕು ಸಮಿತಿ ನೇತೃತ್ವದಲ್ಲಿ ರೈತ ಚೈತನ್ಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು ಚಳ್ಳಕೆರೆ ತಾಲೂಕಾದ್ಯಂತ ಹಳ್ಳಿ ಹಳ್ಳಿಗಳಲ್ಲಿ ಈ ವಿಶೇಷ ಯಾತ್ರೆಯ ಮೂಲಕ ರೈತರ, ಕೃಷಿ ಕಾರ್ಮಿಕರ,ಮಹಿಳೆಯರ ಎಲ್ಲಾ ವರ್ಗದ ಸಮಸ್ಯೆಗಳನ್ನು ನೇರವಾಗಿ ಆಲಿಸಿ ಜನ ಸಂವಾದ ನಡೆಸಿ ಅವರ ಕುಂದು ಕೊರತೆಗಳ ಪಟ್ಟಿ ತಾಲೂಕಿನ ಸಮಗ್ರ ಅಭಿವೃದ್ಧಿಗಾಗಿ ಶ್ರಮಿಸುವುದೇ ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ ಎಂದು ಕೆ ಆರ್ ಎಸ್ ಪಕ್ಷದ ರಾಜ್ಯ ರೈತ ಘಟಕದ ಅಧ್ಯಕ್ಷರಾದ ಶ್ರೀ ಜೋಗನಹಳ್ಳಿ ಗುರುಮೂರ್ತಿ ಅವರು ತಿಳಿಸಿದರು.ತಾಲೂಕಿನಲ್ಲಿ ರೈತರ ನೂರಾರು ಸಮಸ್ಯೆಗಳು ಹಾಗೆಯೇ ಉಳಿದಿದ್ದು ರೈತರು ಬಹಳಷ್ಟು ಸಂಕಷ್ಟಕ್ಕೆ ಸಿಲುಕಿ ಒದ್ದಾಡುತ್ತಿದ್ದಾರೆ.ರೈತರ ಮೂಲ ಸಮಸ್ಯೆಗಳಾದ ಅಕ್ರಮ ಮಾರಾಟ,ಕೃಷಿ ಚಟುವಟಿಕೆಗೆ ವಿದ್ಯುತ್ ಸಮಸ್ಯೆ,ರೈತರ ಬೆಳೆ ಇನ್ಸೂರೆನ್ಸ್ ಸಮಸ್ಯೆ ಸೇ–ರಿದಂತೆ ಹಲವಾರು ಸಮಸ್ಯೆಗಳಿದ್ದು ಜನ ಸಂವಾದ




ಸಂಧರ್ಭದಲ್ಲಿ ಇದನ್ನು ಜನರು ತಿಳಿಸುತ್ತಿದ್ದಾರೆ ಹಾಗಾಗಿ ತಾಲೂಕಿನ ವಿವಿಧ ಹಳ್ಳಿಗಳಲ್ಲಿ ಗ್ರಾಮ ಪಂಚಾಯಿತಿ,ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಭೇಟಿ ಮಾಡಿ ಲಂಚಮುಕ್ತ ಅಭಿಯಾನ ನಡೆಸಲಾಯಿತು.ಇದೇ ಸಂದರ್ಭದಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿ ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಶ್ರೀ ಕೆ ಎಸ್ ವೀರಭದ್ರಪ್ಪ,ರಾಜ್ಯ ರೈತ ಘಟಕದ ಕಾರ್ಯದರ್ಶಿ ನಾಗರೆಡ್ಡಿ, ನಿರುಪಾದಿ ಕೆ ಗೋಮರ್ಸಿ,ತಾಲೂಕ ಅಧ್ಯಕ್ಷ ಕೃಷ್ಣಪ್ಪ,ಪ್ರಧಾನ ಕಾರ್ಯದರ್ಶಿ ಪಾಪಯ್ಯ,ಪಕ್ಷದ ಮುಖಂಡರಾದ ಶ್ರೀಮತಿ ರೇಖಾ,ಲಕ್ಷ್ಮೀ, ಶ್ರೀನಿವಾಸ ಸೇರಿದಂತೆ ಅನೇಕರು ಭಾಗವಹಿಸಿದ್ದರು.









# ಮಾನ್ವಿ : ನೆರಳು ಆಶ್ರಮದ ನೂತನ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ಸಮಾಜದ ಸಹಕಾರವೇ ಆಶ್ರಮದ ಶಕ್ತಿ : ಕಲ್ಮಠ ಶ್ರೀ

ನೈಜ್ಯ ದೆಸೆ ನ್ಯೂಸ್

ಮಾನ್ವಿ : ಪಟ್ಟಣದ ಯರಮಲದೊಡ್ಡಿ ರಸ್ತೆಯ ಪ್ರಕೃತಿ ನಗರದಲ್ಲಿ ಶ್ರೀ ನೆರಳು ಅನಾಥಾಶ್ರಮ ಸೇವಾ ಟ್ರಸ್ಟ್ ನ ನೂತನ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ಕಾರ್ಯಕ್ರಮ ಭಕ್ತಿಪೂರ್ವಕವಾಗಿ ನೆರವೇರಿತು. ಈ ಸಂದರ್ಭದಲ್ಲಿ ಕಲ್ಮಠದ ಪೂಜ್ಯ ಶ್ರೀ ಷ.ಬ್ರ. ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡುತ್ತಾ, "ಸಮಾಜದ ಸಹಕಾರವೇ ಆಶ್ರಮದ ಶಕ್ತಿ" ಎಂದು ಹೇಳಿದರು. ಕಟ್ಟಡ ನಿರ್ಮಾಣ ಕಾರ್ಯ ಅತಿ ಶೀಘ್ರದಲ್ಲಿ ಪೂರ್ಣಗೊಳ್ಳಲಿ ಎಂದು ಹಾರೈಸಿದ ಅವರು, ಎಲ್ಲ ನಾಗರಿಕರು ಧನ ಸಹಾಯದ ಮೂಲಕ ಈ ಪುಣ್ಯ ಕಾರ್ಯದಲ್ಲಿ ಕೈಜೋಡಿಸಬೇಕು ಎಂದು ಮನವಿ ಮಾಡಿದರು.ಇಂದಿನ ಸಮಾಜದಲ್ಲಿ ಮಕ್ಕಳು ದುಶ್ಚಟಗಳಿಗೆ ಒಳಗಾಗುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಶ್ರೀಗಳು ತಿಳಿಸಿದರು. ಮಕ್ಕಳಿಗೆ ಉತ್ತಮ ಸಂಸ್ಕಾರ ಮತ್ತು ಸನ್ಮಾರ್ಗದ ದಾರಿ ತೋ–ರಿಸುವ ಜವಾಬ್ದಾರಿ ಪಾಲಕರದ್ದಾಗಿದೆ. ಸಂಸ್ಕಾರವಂತ ಮಕ್ಕಳು ತಂದೆ–ತಾಯಿಯನ್ನು ಆಶ್ರಮದಲ್ಲಿ ಬಿಡುವುದಿಲ್ಲ; ಕುಟುಂಬದಲ್ಲಿ ಮೌಲ್ಯ ಶಿಕ್ಷಣಕ್ಕೆ ಆದ–ೃತೆ ನೀಡಬೇಕು ಎಂದು ಅವರು ಉಪದೇಶಿಸಿದರು. ಕಲ್ಮಠವು ಯಾವಾಗಲೂ ಆಶ್ರಮದೊಂದಿಗೆ ನಿಂತಿ–ರುತ್ತದೆ ಎಂಬ ವಿಶ್ವಾಸವನ್ನೂ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಮುಖಂಡರಾದ ಸಾಜಿದ್ ಖಾದ್ರಿ, ಸಿದ್ದರಾಮಯ್ಯ ಸ್ವಾಮಿ, ಸಾಹಿತಿಗಳಾದ ರಮೇಶಬಾಬು ಹಾಳಾಗಿ, ಸಂಸ್ಥಾಪಕ ಅಧ್ಯಕ್ಷರಾದ ಚನ್ನಬಸಯ್ಯ ಸ್ವಾಮಿ ಸೇರಿದಂತೆ ಹಿರಿಯ ನಾಗರಿಕರರು, ಟ್ರಸ್ಟ್ ನ ಪದಾಧಿಕಾರಿಗಳು, ಇನ್ನಿತರರು ಉಪಸ್ಥಿತರಿದ್ದರು.



## ನೇಮಕಾತಿ ಪ್ರಕಟಣೆ

ಖಜಾನೆ ಇಲಾಖೆ ಆಯುಕ್ತರ ನೇಮಕಾತಿ 2026: 4 ಸಲಹೆಗಾರರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಖಜಾನೆ ಇಲಾಖೆ ಆಯುಕ್ತರ ಅಧಿಕೃತ ಅಧಿಸೂಚನೆ ಆಗಸ್ಟ್ 2026 ರ ಮೂಲಕ ಸಲಹೆಗಾರರ ಹುದ್ದೆಗಳನ್ನು ಭರ್ತಿ ಮಾಡಲು ಖಜಾನೆ ಇಲಾಖೆ ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರು – ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 10–ಸೆಪ್ಟೆಂಬರ್–2025 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು (13–02–2026 ರವರೆಗೆ ವಿಸ್ತರಿಸಲಾಗಿದೆ) ಅಧಿಕೃತ ವೆಬ್‌ಸೈಟ್: **khajane.karnataka.gov.in**

# ಪರಿಶ್ರಮದಿಂದ ಏಳಿಗೆ: ವಿದ್ಯಾರ್ಥಿಗಳಿಗೆ ರಾಹುಲ್ ಗಾಂಧಿ ಕಿವಿಮಾತು

ನೈಜ್ಯ ದೆಸೆ ನ್ಯೂಸ್

ನವದೆಹಲಿ:ಇತರರು ನಿಮ್ಮ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ ಎಂದು ಆತಂಕಗೊಳ್ಳಬೇಡಿ, ಸರಿಯಾದ ಕೆಲಸ ಮಾಡಬೇಕು ಎಂಬುದಷ್ಟೇ ನಿಮ್ಮ ಆಲೋಚನೆಯಾಗಿರಲಿ' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಯುವ ಸಮುದಾಯಕ್ಕೆ ಕಿವಿಮಾತು ಹೇಳಿದರು.ನಿಮ್ಮ ಬಗ್ಗೆ ಜಗತ್ತು ಏನನ್ನಾದರೂ ಹೇಳಬಹುದು. ನೀವು ಯಾರು ಎಂಬುದನ್ನು ಹೇಳಲೂ ಪ್ರಯತ್ನಿಸಬಹುದು. ಆದರೆ ನಿಜವಾಗಿಯೂ ಮುಖ್ಯವಾದದ್ದು ಏನೆಂದರೆ, ನೀವು ಸತ್ಯದ ಹಾದಿಯಲ್ಲಿದ್ದೀರಿ ಎಂಬುದು ನಿಮಗೆ ಸ್ಪಷ್ಟವಾಗಿರಬೇಕು. ಜೀವನದಲ್ಲಿ ಹೀಗೆಯೇ ಆಗಬೇಕು ಎಂಬುದೇನೂ ಇರುವುದಿಲ್ಲ. ನಮ್ಯತೆ ಮತ್ತು ಪರಿಶ್ರಮದಿಂದಲೇ ಏಳಿಗೆ ಸಾಧ್ಯ' ಎಂದು ಅವರು ಸಲಹೆ ನೀಡಿದರು. ಎನ್‌ಆರ್‌ಐ ವಿದ್ಯಾರ್ಥಿಗಳ ಗುಂಪಿನ ಜತೆ ಸಂವಾದ ನಡೆಸಿದ ಅವರು ಯುವ ಜನರಲ್ಲಿನ ಆತಂಕ ಮತ್ತು ಸಮಸ್ಯೆಗಳ ಕುರಿತು ಚರ್ಚಿಸಿದರು. ಈ ಕುರಿತ ವಿಡಿಯೊವನ್ನು ಅವರು ಯೂಟ್ಯೂಬ್ ಚಾನೆಲ್‌ನಲ್ಲಿ ಹಂಚಿಕೊಂಡಿದ್ದಾರೆ. ಆತ್ಮವಿಶ್ವಾಸದ ಕೊರತೆ, ತಮ್ಮನ್ನು ಇತರರು ನಿರ್ಣಯಿಸುವುದು



ಹಾಗೂ ಅಭದ್ರತೆಗಳ ಕುರಿತು ತಾವು ಎದುರಿಸುತ್ತಿರುವ ಆತಂಕಗಳನ್ನು ವಿದ್ಯಾರ್ಥಿಗಳು ಈ ವೇಳೆ ರಾಹುಲ್ ಅವರ ಗಮನಕ್ಕೆ ತಂದರು. 'ಇಷ್ಟಪಡದವರೂ ಇರುತ್ತಾರೆ':'ಸಮಾಜವು ನಿಮ್ಮ ಬಗ್ಗೆ ತೀರ್ಪುಗಳನ್ನು ನೀಡಬಹುದು. ಬಹುಷಃ ಆ ಸಮಾಜ ನಿಮ್ಮನ್ನು ಆತಂಕ ಮತ್ತು ಅನಾನುಕೂಲತೆಯಲ್ಲಿಯೇ ಇರಬೇಕು ಎಂದು ಬಯಸಬಹುದು. ಅಂದರೆ, ನಿಮ್ಮನ್ನು ಇಷ್ಟಪಡದವರೂ ಇರುತ್ತಾರೆ ಎಂಬುದನ್ನು ಇದರಿಂದ ತಿಳಿದುಕೊಳ್ಳಬೇಕು' ಎಂದು ಅವರು ಹೇಳಿದರು. 'ನನ್ನನ್ನೂ ಯಾವಾಗಲೂ ಹೀಗೆಯೇ ನಿರ್ಣಯಿಸಲಾಗುತ್ತದೆ. ಆದರೆ ನಾನು ಇವುಗಳ ಬಗ್ಗೆ ಗಮನ ಕೊಡುವುದಿಲ್ಲ. ಸರಿಯಾದ ಕೆಲಸ ಮಾಡಬೇಕು ಎಂಬುದಷ್ಟೇ ನನ್ನ ಆಲೋಚನೆ' ಎಂದು ಅವರು ತಿಳಿಸಿದರು.ಸತ್ಯ, ಅಹಿಂಸೆ ಪ್ರಮುಖ ಮೌಲ್ಯಗಳು 'ಸತ್ಯ ಮತ್ತು ಅಹಿಂಸೆ ಪ್ರಮುಖವಾದ ಮೌಲ್ಯಗಳಾಗಿದ್ದು, ಅವುಗಳನ್ನು ಪಾಲಿಸಿ. ಇತರರಿಗೆ ಅಥವಾ ನಿಮಗೆ ಹಿಂಸಾತ್ಮಕವಾಗಿ ಇರಬೇಡಿ. ಅದೇ ವೇಳೆ ಇತರರಿಗೆ ಮತ್ತು ನಿಮಗೆ ಸತ್ಯವಾಗಿರಿ. ಇದಿಷ್ಟಿದ್ದರೆ ಬೇರೆ ಅಗತ್ಯವಿರುವುದಿಲ್ಲ' ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.'ಯಾವುದೇ ಪರಿಸ್ಥಿತಿಯಲ್ಲಿ ಆತಂಕಗೊಳ್ಳಬೇಡಿ, ಇತರರ ಬಗ್ಗೆ ಪ್ರೀತಿ, ವಾತ್ಸಲ್ಯದಿಂದ ಜೀವನ ಮುನ್ನಡೆಸಿ' ಎಂದು ರಾಹುಲ್ ಅವರು ವಿದ್ಯಾರ್ಥಿಗಳಿಗೆ ಯಶಸ್ಸಿನ ಬಗ್ಗೆ ತಿಳಿಸಿದರು. 'ನಾನು ಅತ್ಯಂತ ಶಕ್ತಿಶಾಲಿ ವ್ಯಕ್ತಿಯಾಗಿರಬಹುದು, ಅತ್ಯಂತ ಶ್ರೀಮಂತನೇ ಆಗಿರಬಹುದು, ಆದರೆ ಸುತ್ತಮುತ್ತಲಿನ ಜನರ ಬಗ್ಗೆ ನನ್ನಲ್ಲಿ ಗೌರವ ಇಲ್ಲದಿದ್ದರೆ ಅದು ಯಶಸ್ಸು ಎನಿಸಿಕೊಳ್ಳುವುದಿಲ್ಲ' ಎಂದು ಅವರು ವಿವರಿಸಿದರು. 'ಜೀವನದಲ್ಲಿ ಎಲ್ಲವೂ ಸರಳವಾಗಿ ಹೋಗುವುದಿಲ್ಲ. ನಮ್ಯತೆ ಮತ್ತು ಪರಿಶ್ರಮ ಅತ್ಯಗತ್ಯವಾಗಿ ಇರಬೇಕಾದ ಗುಣಗಳು' ಎಂದು ಅವರು ಕಿವಿಮಾತು ಹೇಳಿದರು.

## ಮದುವೆ ಸಮಾರಂಭಕ್ಕೆ ಸಿಎಂ, ಡಿಸಿಎಂ ಆಗಮನ , ಸಮನ್ವಯ ಕೊರತೆಯಿಂದ ಬದಲಾದ ಹೆಲಿಪ್ಯಾಡ್

ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು : ಫೆ.9 – ಪಟ್ಟಣದ ರಾಯಚೂರು ರಸ್ತೆಯ ಖಾಸಗಿ ಲೇಔಟ್ ಬಳಿ ಎಂಎಲ್‌ಸಿ ಶರಣಗೌಡ ಬಯ್ಯಾಪೂರ ಪುತ್ರನ ಮದುವೆ ಸಮಾರಂಭಕ್ಕೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಭೇಟಿ ವೇಳೆ ಹೆಲಿಪ್ಯಾಡ್ ವ್ಯವಸ್ಥೆಯಲ್ಲಿ ಗೊಂದಲ ಉಂಟಾಗಿ ಅಧಿಕಾರಿಗಳು ತರಾತುರಿಯಲ್ಲಿ ಓಡಾಡಿದ ಘಟನೆ ಜರುಗಿತು. ಸಿಎಂ ಹಾಗೂ ಡಿಸಿಎಂ ಆಗಮನಕ್ಕಾಗಿ ಪ್ರತ್ಯೇಕವಾಗಿ ಹೆಲಿಪ್ಯಾಡ್ ನಿರ್ಮಿಸಲಾಗಿತ್ತು. ಆದರೆ ಸಿಎಂಗೆ ಮೀಸಲಾದ ಹೆಲಿಪ್ಯಾಡ್‌ಗೆ ಸತೀಶ್ ಜಾರಕಿಹೊಳಿ ಅವರ ಹೆಲಿಕಾಪ್ಟರ್ ಇಳಿದಿದ್ದು, ಕಲಬುರಗಿ ರಸ್ತೆಯ ಶಾಸಕ ಮಾನಪ್ಪ ರವರಿಗೆ ಸೇರಿದ ಹೆಲಿಪ್ಯಾಡ್‌ನಲ್ಲಿ ಸಿಎಂ ಹೆಲಿಕಾಪ್ಟರ್ ಇಳಿದ ಘಟನೆ ನಡೆದಿದೆ. ಇದರಿಂದ ಸಿಎಂ ಸ್ವಾಗತಕ್ಕೆ ಸಿದ್ಧವಾಗಿದ್ದ ಅಧಿಕಾರಿಗಳಿಗೆ ಕ್ಷಣಕಾಲ ಗೊಂದಲ ಮತ್ತು ಅಚ್ಚರಿ ಉಂಟಾಯಿತು. ಅಧಿಕಾರಿಗಳ ಸಮನ್ವಯ ಕೊರತೆಯಿಂದಾಗಿ ಹೆಲಿಕಾಪ್ಟರ್ ಇಳಿಯುವ ಸ್ಥಳಗಳಲ್ಲಿ ವ್ಯತ್ಯಾಸ ಕಂಡುಬಂದಿದ್ದು, ಸ್ಥಳದಲ್ಲಿ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಯಿತು. ಸಿಎಂ ಹಾಗೂ ಡಿಸಿಎಂ ಆಗಮನ ಸಮಯದಲ್ಲೂ ವ್ಯತ್ಯಾಸವಿದ್ದು, ನಿಗದಿತ ಸಮಯಕ್ಕಿಂತ ಮುಂಚಿತವಾಗಿ ಆಗಮಿಸಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿ ನಂತರ ಹುಬ್ಬಳ್ಳಿ ಕಡೆಗೆ ಹೊರಟರು. ಮದುವೆ ಸಮಾರಂಭದಲ್ಲಿ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಪ್ರತ್ಯೇಕವಾಗಿ ಭಾಗವಹಿಸಿದ್ದರು.ಸಹಕಾರದೊಂದಿಗೆ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.




# ಕಪ್ಪತಗುಡ್ಡದಲ್ಲಿ ಚಿನ್ನವಷ್ಟೇ ಅಲ್ಲ, ವಜ್ರಗಳ ಭಂಡಾರವೂ ಇದೆಯಾ?

ನೈಜ್ಯ ದೆಸೆ ನ್ಯೂಸ್

ಗದಗ: ಕರ್ನಾಟಕದ ಗದಗ ಜಿಲ್ಲೆಯ ಕಪ್ಪತಗುಡ್ಡ ಪರ್ವತ ಶ್ರೇಣಿ ಪ್ರದೇಶದಲ್ಲಿ ಚಿನ್ನ ಮಾತ್ರವಲ್ಲ, ವಜ್ರ ಹಾಗೂ ಇತರ ಅಮೂಲ್ಯ ಖನಿಜಗಳ ಭಂಡಾರಗಳು ಇರುವ ಸಾಧ್ಯತೆ ಇದೆ ಎಂದು ಭೂವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.ಈ ಪ್ರದೇಶ ದಕ್ಷಿಣ ಭಾರತದ ಪ್ರಸಿದ್ಧ ಪ್ರಿಕ್ಯಾಂಬ್ರಿಯನ್ ಶಿಲಾರಚನೆಯ ಭಾಗವಾಗಿದ್ದು, ಇಂತಹ ಪ್ರಾಚೀನ ಶಿಲಾರಚನೆ ಪ್ರದೇಶಗಳಲ್ಲಿ ವಜ್ರಗಳೂ ದೊರೆಯುವ ಸಾಧ್ಯತೆ ಹೆಚ್ಚಿರುತ್ತದೆ ಭೂವಿಜ್ಞಾನಿಗಳು ತಿಳಿಸಿದ್ದಾರೆ.ಹಿಂದಿನ ಅಧ್ಯಯನಗಳು ಮುಖ್ಯವಾಗಿ ಚಿನ್ನದ ಸಂಶೋಧನೆಗೆ ಸೀಮಿತವಾಗಿದ್ದರೂ, ಇತ್ತೀಚಿನ ಸಮೀಕ್ಷೆಗಳು ವಜ್ರ, ಕಬ್ಬಿಣ ಮತ್ತು ಮ್ಯಾಂಗನೀಸ್ ಸೇರಿದಂತೆ ಇತರ ಅಮೂಲ್ಯ ಖನಿಜಗಳ ಭಂಡಾರಗಳು ಇರುವ ಸಾಧ್ಯತೆಗಳಿರುವ ಸೂಚನೆಗಳನ್ನು ನೀಡುತ್ತಿವೆ.ಗದಗ ಬಳಿಯ ಹೊಸೂರಿನ ಗ್ರಾಮಸ್ಥರೊಬ್ಬರು ಮಾತನಾಡಿ,



ನಮ್ಮ ಹಳ್ಳಿಗಳಲ್ಲಿ ಚಿನ್ನ ಮತ್ತು ವಜ್ರದ ಗಣಿಗಳು ಇವೆ ಎಂದು ನಮ್ಮ ತಂದೆ ಮತ್ತು ಚಿಕ್ಕಪ್ಪಂದಿರು ಹೇಳಿದ್ದನ್ನು ಕೇಳಿದ್ದೇವೆ. 1960 ರವರೆಗೆ ವಜ್ರ ಗಣಿಗಾರಿಕೆ ಇತ್ತು. ನಂತರ ಏಕೆ ನಿಂತಿಹೋಯಿತು ಎಂಬುದು ಗೊತ್ತಿಲ್ಲ. ಬ್ರಿಟಿಷ್ ಸರ್ಕಾರವು ಇಲ್ಲಿಂದ ಎಲ್ಲಾ ಚಿನ್ನ ಮತ್ತು ವಜ್ರಗಳನ್ನು ತೆಗೆದುಕೊಂಡು ಹೋಗಿರಬಹುದು ಎಂದು ಹೇಳಿದ್ದಾರೆ.ಕೊಪ್ಪಳದ ಭೂವಿಜ್ಞಾನಿ ಚಂದ್ರಕಾಂತ್ ಕೆ ಅವರು ಮಾತನಾಡಿ, ಕೇಂಬ್ರಿಯನ್ ಯುಗದಲ್ಲಿ ಜೀವಿಗಳ ವೈವಿಧ್ಯತೆ ಮತ್ತು ಸಂಕೀರ್ಣತೆಯಲ್ಲಿ ಹಠಾತ್ ಹೆಚ್ಚಳ ಕಂಡುಬಂದಿತು, ಈ ಯುಗದಲ್ಲಿ, ಖಂಡಗಳು ರೂಪುಗೊಂಡು ಆಧುನಿಕ ವಾತಾವರಣವು ಅಭಿವೃದ್ಧಿಗೊಂಡಿತು, ಹುಳುಗಳು ಮತ್ತು ಜೆಲ್ಲಿ ಮೀನುಗಳಂತಹ ಮೃದು ದೇಹದ ಜೀವಿಗಳು ಪ್ರಾಚೀನ ರೂಪಾಂತರ ಶಿಲೆಗಳಂತೆ ಕಾಣುತ್ತವೆ. ಇದರ ಬಗ್ಗೆ ಸಮೀಕ್ಷೆ ನಡೆಸಬೇಕು. ಈ ಪ್ರದೇಶದ ಶಿಲಾರಚನೆಗಳು ಅತ್ಯಂತ ಪ್ರಾಚೀನ ಮೆಟಾಮಾರ್ಫಿಕ್ ಜಿಯೋಲಾಜಿಕಲ್ ಸರ್ವೇ ಆಫ್ ಇಂಡಿಯಾ ವಜ್ರ ಕುರಿತು ಸಮೀಕ್ಷೆ ನಡೆಸಬೇಕು ಎಂದು ಸಲಹೆ ನೀಡಿದ್ದಾರೆ.ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಹಿರಿಯ ನಿರ್ದೇಶಕ ನಾಗ್ ಭೂಷಣ್ ಅವರು ಮಾತನಾಡಿ, ಈ ಪ್ರದೇಶದ ಶಿಲಾರಚನೆಗಳು ಲಕ್ಷಾಂತರ ವರ್ಷಗಳ ಹಿಂದಿನವುಗಳಾಗಿದ್ದು, ಭೂಗರ್ಭದಲ್ಲಿ ಅನೇಕ ರಾಸಾಯನಿಕ ಪ್ರಕ್ರಿಯೆಗಳು ನಡೆದಿರಬಹುದು. ವಜ್ರ ಮತ್ತು ಇನ್ನೂ ಅನೇಕ ಅಮೂಲ್ಯ ಲೋಹಗಳಿರುವ ಸಾಧ್ಯತೆಯನ್ನು ನಿರಾಕರಿಸಲಾಗುವುದಿಲ್ಲ ಎಂದು ತಿಳಿಸಿದ್ದಾರೆ.

## ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಸಮಾರೋಪ ಸಮಾರಂಭದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ನೈಜ್ಯ ದೆಸೆ ನ್ಯೂಸ್

ರಾಯಚೂರು : 'ಬೇಸಿಗೆ ಮುಗಿಯುವ ವೇಳೆಗೆ ತುಂಗಭದ್ರಾ ಅಣೆಕಟ್ಟೆಗೆ ಎಲ್ಲ ಗೇಟ್‌ಗಳನ್ನು ಅಳವಡಿಸಲಾಗುವುದು. ಈ ಭಾಗದ ರೈತರಿಗೆ ಯಾವುದೇ ರೀತಿಯ ಸಮಸ್ಯೆ ಉಂಟಾದಂತೆ ನೋಡಿಕೊಳ್ಳಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.ತುಂಗಭದ್ರೆಯ 30 ಟಿಎಂಸಿ ಅಡಿ ನೀರು ಬಳಸಿಕೊಳ್ಳದ ಕಾರಣ ಹರಿದು ಹೋಗುತ್ತಿದೆ. ಆಂಧ್ರಪ್ರದೇಶ ಮುಖ್ಯಮಂತ್ರಿ ಅವರೊಂದಿಗೆ ಮಾತುಕತೆ ನಡೆಸಲು ಸಿದ್ಧರಿದ್ದೇವೆ. ಆದರೆ, ಆಂಧ್ರದ ಮುಖ್ಯಮಂತ್ರಿ ಅದಕ್ಕೆ ಅವಕಾಶ ಕೊಡುತ್ತಿಲ್ಲ' ಎಂದು ತಿಳಿಸಿದರು. ಎಡದಂಡೆ ಕಾಲುವೆಯ ಅಂಚಿನ ವರೆಗಿನ ರೈತರಿಗೂ ನೀರು ಹರಿಯುವಂತಾಗಬೇಕು ಎನ್ನುವ ಬೇಡಿಕೆ ಹಾಗೂ ಒತ್ತಡ ಇದೆ. ಕಾಲುವೆ ನೀರು ದುರ್ಬಳಕೆ ಆಗುವುದನ್ನು ತಡೆಯಲು ಈಗಾಗಲೇ ಕಾಲುವೆ ಸುತ್ತಮುತ್ತ 500 ಮೀಟರ್ ವ್ಯಾಪ್ತಿಯಲ್ಲಿ ಮೋಟರ್‌ಗಳ ಬಳಕೆ ಹಾಗೂ ಬೋರ್‌ವೆಲ್ ಕೊರೆಯುವುದನ್ನು ನಿಷೇಧಿಸಲಾಗಿದೆ' ಎಂದು ಹೇಳಿದರು.ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣಪ್ರಕಾಶ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಸಣ್ಣ ನೀರಾವರಿ ಸಚಿವ ಎನ್. ಎಸ್.ಬೋಸರಾಜು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಆರ್.ಬಸನಗೌಡ ತುರುವಿಹಾಳ, ರಾಜ್ಯ ಕೈಗಾರಿಕೆ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಂಪನಗೌಡ ಬಾದರ್ಲಿ, ಸಂಸದ ಕುಮಾರ ನಾಯಕ, ಶಾಸಕರಾದ ಡಾ.ಶಿವರಾಜ ಪಾಟೀಲ, ಹಂಪಯ್ಯ ನಾಯಕ, ವಿಧಾನ ಪರಿಷತ್ ಸದಸ್ಯ ವಸಂತಕುಮಾರ, ಮಲ್ಲಿಕಾರ್ಜುನ ಗೌಡ, ರಾಜಶೇಖರ ರಾಮಸ್ವಾಮಿ, ಪಾಮಯ್ಯ ಮುರಾರಿ, ಪವನ ಕಿಶೋರ ಪಾಟೀಲ, ಜಿಲ್ಲಾಧಿಕಾರಿ ನಿತೀಶ್ ಕೆ., ಜಿಲ್ಲಾ ಪಂಚಾಯಿತಿ ಸಿಇಒ ಈಶ್ವರಕುಮಾರ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ, ಸಾವಿತ್ರಿ ಪುರುಷೋತ್ತಮ, ಎಸ್.ಆರ್. ರೆಡ್ಡಿ, ಡಾ.ರಮೇಶ, ವಿಷ್ಣುಕಾಂತ ಭುತಡಾ ಉಪಸ್ಥಿತರಿದ್ದರು.







## ವಿನೋದ ವಿಜ್ಞಾನ ಮಾದರಿಗಳು ಮತ್ತು ಡಿಜಿಟಲ್ ಸಂಚಾರಿ ತಾರಾಲಯದ ಪ್ರದರ್ಶನ

ನೈಜ್ಯ ದೆಸೆ ನ್ಯೂಸ್

ರಾಯಚೂರು: ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಅಂಗವಾಗಿ ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿನ ವಿನೋದ ವಿಜ್ಞಾನ ಮಾದರಿಗಳು ಮತ್ತು ಡಿಜಿಟಲ್ ಸಂಚಾರಿ ತಾರಾಲಯದ ಪ್ರದರ್ಶನದ ಮಳಿಗೆಗಳು ಶಾಲಾ ಮಕ್ಕಳು ಹಾಗೂ ಸಾರ್ವಜನಿಕರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿವೆ.ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಬೆಂಗಳೂರು, ರಾಯಚೂರಿನ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಸಹಯೋಗದಲ್ಲಿ ಪ್ರದರ್ಶನ ಮಳಿಗೆಗಳನ್ನು ತೆರೆಯಲಾಗಿದೆ.ಈ ಮಳಿಗೆಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಹಮ್ಮಿಕೊಳ್ಳಲಾಗುವ ಕಾರ್ಯಕ್ರಮಗಳು ಮತ್ತು ಯೋಜನೆಗಳ ಕುರಿತು ಮಾಹಿತಿ, ವಿನೋದ ವಿಜ್ಞಾನ ಮತ್ತು ಖಗೋಳ ವಿಜ್ಞಾನಕ್ಕೆ ಸಂಬಂಧಿಸಿದ ಮಾದರಿಗಳು ಹಾಗೂ ಸಂಚಾರಿ ತಾರಾಲಯ ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ.ಶನಿವಾರ ಉತ್ಸವದ ಕೊನೆಯ ದಿನವಾದ ಕಾರಣ ಈ ಮಳಿಗೆಗಳ ಡಿಜಿಟಲ್ ಸಂಚಾರಿ ತಾರಾಲಯದ ಮುಂಭಾಗದಲ್ಲಿ ಪ್ರದರ್ಶನದ ವೀಕ್ಷಣೆಗಾಗಿ ದಿನವಿಡೀ ವಿವಿಧ ಶಾಲೆಗಳ ಮಕ್ಕಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸರದಿ ಸಾಲಿನಲ್ಲಿ ನಿಂತಿರುವ ದೃಶ್ಯ ಕಂಡು ಬಂದಿತು.'ಡಿಜಿಟಲ್ ಸಂಚಾರಿ ತಾರಾಲಯದಲ್ಲಿ ಶಾಲಾ ಮಕ್ಕಳಿಗೆ ಒಂದು ದೊಡ್ಡ ಪರದೆಯ ಮೇಲೆ ವಿವಿಧ ಗ್ರಹಗಳು, ನಕ್ಷತ್ರಗಳು ಮತ್ತು ಇತರ ಖಗೋಳ ವಸ್ತುಗಳನ್ನು ತೋರಿಸಲಾಗುತ್ತದೆ' ಎಂದು ಡಿಜಿಡಲ್ ಸಂಚಾರಿ ತಾರಾಲಯದ ಸಂಚಾಲಕರಾದ ಮೊಹಮ್ಮದ್ ಜುನೈದ್ ಹಾಗೂ ಮಹಾದೇವ ತಿಳಿಸಿದರು.'ತಾರಾಲಯದಲ್ಲಿ ಸೌರವ್ಯೂಹ, ನಕ್ಷತ್ರಗಳ ದೃಶ್ಯಗಳ ವೀಕ್ಷಣೆ ಹೆಚ್ಚು ಕುತೂಹಲ ಮೂಡಿಸಿದವು' ಎಂದು 6ನೇ ತರಗತಿ ವಿದ್ಯಾರ್ಥಿಗಳಾದ ಶಿವರಾಜ, ಪ್ರಕಾಶ ತಿಳಿಸಿದರು.'ಸಂಚಾರಿ ತಾರಾಲಯದಲ್ಲಿನ ವೀಕ್ಷಣೆ ಮಕ್ಕಳ ಜ್ಞಾನ ವೃದ್ಧಿಗೆ ಸಹಕಾರಿಯಾಗಿದೆ. ಮಕ್ಕಳಲ್ಲಿ ವಿಜ್ಞಾನ ಹಾಗೂ ಖಗೋಳಶಾಸ್ತ್ರದ ಕುರಿತು ಕುತೂಹಲ, ಹೆಚ್ಚಿನ ಆಸಕ್ತಿ ಮೂಡಿಸುತ್ತದೆ' ಎಂದು ರಾಯಚೂರಿನ ಶಿಕ್ಷಕ ಶ್ರೀಧರ್ ತಿಳಿಸಿದರು.'ಉತ್ಸವದ ಮೂರು ದಿನಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಾರ್ವಜನಿಕರು ಈ ವಿಜ್ಞಾನ ಮಳಿಗೆಗಳಿಗೆ ಭೇಟಿ ನೀಡಿ ವೀಕ್ಷಿಸಿದ್ದಾರೆ' ಎಂದು ರಾಯಚೂರು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಅಧಿಕಾರಿ ಅಜಿತ್ ಕುಮಾರ ಹೇಳಿದರು.'ಜಿಲ್ಲಾ ಉತ್ಸವದಲ್ಲಿ ಮಕ್ಕಳ ಶಿಕ್ಷಣಕ್ಕೆ ಪೂರಕವಾದ ಪುಸ್ತಕಗಳ ಮಾರಾಟ ಹಾಗೂ ವಿಜ್ಞಾನ ವಸ್ತು ಪ್ರದರ್ಶನಕ್ಕೆ ಅವಕಾಶ ನೀಡಿರುವುದು ಶ್ಲಾಘನೀಯ' ಎಂದು ಪಾಲಕರಾದ ರಮೇಶ ತಡಕಲ್ ಹಾಗೂ ಬಸವರಾಜ ಚ್ಯಾಗಿ ಅಭಿಪ್ರಾಯಪಟ್ಟರು.







## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಚಾರ್ಟರ್ಡ್ ಅಕೌಂಟೆಂಟ್ (CA)

ಚಾರ್ಟರ್ಡ್ ಅಕೌಂಟೆಂಟ್ (CA) ಅಂದರೆ ಹಣ–ಕಾಸು, ಲೆಕ್ಕಪತ್ರ, ತೆರಿಗೆ (Tax), ಆಡಿಟ್, ಕಂಪನಿ ಕಾನೂನು ಮೊದಲಾದ ವಿಷಯಗಳಲ್ಲಿ ಪರಿಣತಿ ಹೊಂದಿರುವ ವೃತ್ತಿಪರರು. ಈ ಕೋರ್ಸ್ ಅನ್ನು ಖಅಂಖ (Institute of Chartered Accountants of India) ನಡೆಸುತ್ತದೆ.CA ಕೋರ್ಸ್ ಒಟ್ಟು 3 ಮುಖ್ಯ ಹಂತಗಳು ಇರುತ್ತವೆ: 1) CA Foundation, 12ನೇ ತರಗತಿ (PUC) ನಂತರ ಪ್ರವೇಶವಿಷಯಗಳು:Accounting,Business Laws,Quantitative,Aptitude (Maths, Stats),Business Economics ಅವಧಿ: ಸುಮಾರು 6 ತಿಂಗಳು ಪರೀಕ್ಷೆ: ವರ್ಷಕ್ಕೆ 3 ಬಾರಿ (ಜನೆವರಿ, ಮೇ, ಸೆಪ್ಟೆಂಬರ್) 2) CA Intermediate,Foundation ಪಾಸ್ ಆದ ನಂತರ ಅಥವಾ ಡಿಗ್ರಿ B.Com 65% ನಲ್ಲಿ ಪಾಸಾದರೆ 2 ಗುಂಪುಗಳು (Group 1 & Group 2 ಮುಖ್ಯ ವಿಷಯಗಳು:Advanced Accounting,Corporate & Other Laws,Cost & Management,Accounting,Taxation (Income Tax + GST),Auditing,Financial Management & Strategic Management ಅವಧಿ: 8–9 ತಿಂಗಳು ಓದು ಆಮೇಲೆ ಪರೀಕ್ಷೆ: ವರ್ಷಕ್ಕೆ 3 ಬಾರಿ (ಜನೆವರಿ, ಮೇ, ಸೆಪ್ಟೆಂಬರ್) Group-wise ಅಥವಾ ಒಂದೇ ಸಲ ಎರಡೂ ಗ್ರೂಪ್ ಬರೆಯಬಹುದು 2 ಪಾಸಾದ ನಂತರ,Articleship Training Intermediate (ಎರಡು ಗ್ರೂಪ್ ಪಾಸ್ ಆದ ಮೇಲೆ) 2 ವರ್ಷಗಳ ಪ್ರಾಯೋಗಿಕ ತರಬೇತಿ ಈ ಅವಧಿಯಲ್ಲಿ:ಆಡಿಟ್ ಟ್ಯಾಕ್ಸ್ ಫೈಲಿಂಗ್ ಕಂಪನಿ ಕೆಲಸ ಪ್ರಾಕ್ಟಿಕಲ್ ಅನುಭವ ಪಡೆದು ನಂತರ ಮುಂದೆ 3) CA Final ಸಮಯದಲ್ಲಿ ಅಥ–ವಾ ಕೊನೆಯಲ್ಲಿ ವಿಷಯಗಳು (ಉನ್ನತ ಮಟ್ಟ):– Financial Reporting,Strategic,Financial Management,Advanced Auditing,Direct & Indirect Tax Laws,Corporate Laws, Ethics ಒಂದೊಂದು ಗ್ರೂಪ್ ಅಥವಾ ಎರಡು ಗ್ರೂಪ್ ಬರೆದು ಎರಡೂ ಗ್ರೂಪ್ ಪಾಸ್ ಆದರೆ ಅಂ ಪದವಿ ಅಂ ಕೋರ್ಸ್ ಅವಧಿ ಸರಾಸರಿ 4.5 ರಿಂದ 5 ವರ್ಷಗಳು (ಹೆಚ್ಚು ಶ್ರಮ + ಸಮರ್ಪಣೆ, ದೃಢ ನಿರ್ಧಾರ, ಕನ್ಸಿಸ್ಟೆನ್ಸಿ ಇದ್ದರೆ ಪಾಸ್ ಆಗಬಹುದು) CA ಆದ ನಂತರ ಅವಕಾಶಗಳು Chartered Accountant,Auditor,Tax Consultant,-Finance Manager,Company CFO,ಸ್ವಂತ ಪ್ರಾಕ್ಟೀಸ್ (CA Firm) ಸಂಬಳ:ಆರಂಭದಲ್ಲಿ ₹6–10 ಲಕ್ಷ/ವರ್ಷ ಅನುಭವದೊಂದಿಗೆ ₹20+ ಲಕ್ಷವೂ ಸಾಧ್ಯ.ಹೆಚ್ಚಿನ ಮಾಹಿತಿಗಾಗಿ WWW.ICAI.Com ಗೆ ಸರ್ಚ್ ಮಾಡಿ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಯುವ ಕವಿಗೋಷ್ಠಿ




**ನೈಜ್ಯ ದೆಸೆ ನ್ಯೂಸ್**

ರಾಯಚೂರು : 'ಯುವಕವಿಗಳು ಯಾವ ಪಂಥದಲ್ಲೂ ಗುರುತಿಸಿಕೊಳ್ಳದೆ ಸಮಾಜದ ಒಳಿತಿಗಾಗಿ ಕವಿತೆಗಳನ್ನು ರಚಿಸಬೇಕು' ಎಂದು ದಲಿತ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ತಾಯರಾಜ್ ಮರ್ಚಟಾಳ್ ಸಲಹೆ ನೀಡಿದರು.ಇಲ್ಲಿನ ಮಹಿಳಾ ಸಮಾಜದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಅಂಗವಾಗಿ ಏರ್ಪಡಿಸಿದ್ದ ಯುವ ಕವಿಗೋಷ್ಠಿ ಉದ್ಘಾಟಿಸಿ ಮಾತನಾಡಿದರು. ಇತ್ತೀಚಿಗೆ ಯುವಕರಲ್ಲಿ ಸಾಹಿತ್ಯದ ಹವ್ಯಾಸ ಕಡಿಮೆಯಾಗುತ್ತಿದೆ. ಯುವ ಸಮೂಹ ಓದುವ ಹವ್ಯಾಸವನ್ನು ರೂಢಿಸಿಕೊಂಡರೆ ಜ್ಞಾನ ವೃದ್ಧಿಸಿಕೊಳ್ಳಬಹುದು. ಜತೆಗೆ ನಿತ್ಯ ಪತ್ರಿಕೆಗಳನ್ನು ಓದುವುದರಿಂದ ಪ್ರಚಲಿತ ವಿದ್ಯಮಾನ ತಿಳಿಯಬಹುದು. ಇದ–ರಿಂದ ಕವಿಗಳು ಆಗುಹೋಗುಗಳನ್ನು ಕವಿತೆ ಮೂಲಕ ಸಾದರ ಪಡಿಸಲು ಸಾಧ್ಯವಾಗುತ್ತದೆ' ಎಂದು ತಿಳಿಸಿದರು.'ಕವಿತೆಗೆ ತನ್ನದೇ ಅದ ಶೈಲಿ ಇದೆ. ಕವಿ ಬಿಟ್ಟು ಕಾವ್ಯ ಇಲ್ಲ, ಕಾವ್ಯ ಬಿಟ್ಟು ಕವಿ ಇಲ್ಲ. ವರ್ತಮಾನದಲ್ಲಿನ ವಿಚಾರಗಳ ಬಗ್ಗೆ ಯುವಕರು ತಿಳಿದುಕೊಂಡು ಅಧ್ಯಯನ ಮಾಡಬೇಕು. ಯುವಕರು ಈ ದೇಶದ ಆಸ್ತಿ, ಮನಸ್ಸು ಮಾಡಿದರೆ ದೇಶ ಹಾಗೂ ಸಮಾಜವನ್ನು ಅಭಿವೃದ್ಧಿ ಮಾಡಬಹುದು' ಎಂದರು.ಹಿರಿಯ ಸಾಹಿತಿ ಚನ್ನಬಸವ ಹಿರೇಮಠ ಮಾತನಾಡಿ, 'ಸುಮಾರು 40 ವರ್ಷಗಳ ಹಿಂದೆ ಧಾರವಾಡ ಪರಿಸರದಲ್ಲಿ ಒಂದು ಮಾತು ಚಲಾವಣೆಯಲ್ಲಿತ್ತು. ಅದು ನಮ್ಮ ಕವಿಗಳ ಶೈಕ್ಷಣಿಕ ಬೆಳವಣಿಗೆ ಯಾವ ಹಂತಕ್ಕೆ ಹೋಗಿದೆ ಎಂಬುದನ್ನು ಕಣ್ಮುಂದೆ ತರುತ್ತದೆ. ತುಳಿತಕ್ಕೆ ಒಳಗಾದವರು ಶೈಕ್ಷಣಿಕ, ಆರ್ಥಿಕವಾಗಿ ಅನೇಕ ಸವಾಲುಗಳನ್ನು ಎದುರಿಸಿದ್ದಾರೆ' ಎಂದು ಅಸಮಾಧಾನ ಹೊರಹಾಕಿದರು.'ಯುವಕರಿಗೆ ಬಹಳಷ್ಟು ಅವಕಾಶವಿದ್ದು, ಕಣ್ಣ ಮುಂದೆ ನಡೆಯುವ, ನಮ್ಮ ನೆಲದ ವಿಷಯಗಳನ್ನು ತಿಳಿಸಬೇಕು. ಕವಿತೆಗಳು ಮನಸುಗಳನ್ನು ರಂಜಿಸುವ ಕವಿತೆ ಆಗಬಾರದು. ಜೊತೆಗೆ ಹೃದಯಕ್ಕೆ ಆಪ್ತವಾಗಿ ಬರೆಯಬಾರದು. ಸಮಾಜವನ್ನು ಸರಿ ದಾ–ರಿಗೆ ತರುವಂಥ ಕವಿತೆಗಳನ್ನು ಯುವಕರು ಬರೆಯಬೇಕು' ಎಂದು ಕಿವಿಮಾತು ಹೇಳಿದರುಆಕಾಶವಾಣಿ ಮುಖ್ಯಸ್ಥ ವೆಂಕಟೇಶ ಬೇವಿನಬೆಂಚಿ ಅಧ್ಯಕ್ಷತೆ ವಹಿಸಿದ್ದರು. ಗ್ರೇಡ್–2 ತಹಶೀಲ್ದಾರ್ ಪರಶುರಾಮು, ವಾರ್ತಾ ಇಲಾಖೆಯ ಗವಿಸಿದ್ದಪ್ಪ ಹೊಸಮನಿ, ಕನ್ನಡ ಸಾಹಿತ್ಯ ಪರಿಷತ್ತಿನ ಲಿಂಗಸುಗೂರು ತಾಲ್ಲೂಕು ಘಟಕದ ಅಧ್ಯಕ್ಷ ಮಹದೇವಪ್ಪ ನಾಗರಾಳ, ಕನ್ನಡ ಸಾಹಿತ್ಯ ಪರಿಷತ್ತು ಮಾನ್ವಿ ತಾಲ್ಲೂಕು ಘಟಕದ ಅಧ್ಯಕ್ಷ ಶರಣಬಸವ ನೀರಮಾನ್ವಿ, ಕಥೆಗಾರ ಕಲಿಗಣನಾಥ ಗುಡದೂರ, ಕವಿಗಳಾದ ಶಿವರಾಜ ಬೆಟ್ಟದೂರ ಹಾಗೂ ಯುವ ಕವಿಗಳು ಉಪಸ್ಥಿತರಿದ್ದರು

# ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಸಮಾರೋಪ ಸಮಾರಂಭದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್




**ನೈಜ್ಯ ದೆಸೆ ನ್ಯೂಸ್**

ರಾಯಚೂರು : 'ಬೇಸಿಗೆ ಮುಗಿಯುವ ವೇಳೆಗೆ ತುಂಗಭದ್ರಾ ಅಣೆಕಟ್ಟೆಗೆ ಎಲ್ಲ ಗೇಟ್‌ಗಳನ್ನು ಅಳವಡಿಸಲಾಗುವುದು. ಈ ಭಾಗದ ರೈತ–ರಿಗೆ ಯಾವುದೇ ರೀತಿಯ ಸಮಸ್ಯೆ ಉಂಟಾದಂತೆ ನೋಡಿಕೊಳ್ಳಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.ತುಂಗಭದ್ರೆಯ 30 ಟಿಎಂಸಿ ಅಡಿ ನೀರು ಬಳಸಿಕೊಳ್ಳದ ಕಾರಣ ಹರಿದು ಹೋಗುತ್ತಿದೆ. ಆಂಧ್ರಪ್ರದೇಶ ಮುಖ್ಯಮಂತ್ರಿ ಅವರೊಂದಿಗೆ ಮಾತುಕತೆ ನಡೆಸಲು ಸಿದ್ಧರಿದ್ದೇವೆ. ಆದರೆ, ಆಂಧ್ರದ ಮುಖ್ಯಮಂತ್ರಿ ಅದಕ್ಕೆ ಅವಕಾಶ ಕೊಡುತ್ತಿಲ್ಲ' ಎಂದು ತಿಳಿಸಿದರು.'ಎಡದಂಡೆ ಕಾಲುವೆಯ ಅಂಚಿನ ವರೆಗಿನ ರೈತರಿಗೂ ನೀರು ಹರಿಯುವಂತಾಗಬೇಕು ಎನ್ನುವ ಬೇಡಿಕೆ ಹಾಗೂ ಒತ್ತಡ ಇದೆ. ಕಾಲುವೆ ನೀರು ದುರ್ಬಳಕೆ ಆಗುವುದನ್ನು ತಡೆಯಲು ಈಗಾಗಲೇ ಕಾಲುವೆ ಸುತ್ತಮುತ್ತ 500 ಮೀಟರ್ ವ್ಯಾಪ್ತಿಯಲ್ಲಿ ಮೋಟರ್‌ಗಳ ಬಳಕೆ ಹಾಗೂ ಬೋರ್‌ವೆಲ್ ಕೊರೆಯುವುದನ್ನು ನಿಷೇಧಿಸಲಾಗಿದೆ' ಎಂದು ಹೇಳಿದರು.ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣಪ್ರಕಾಶ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಆರ್.ಬಸನಗೌಡ ತುರುವಿಹಾಳ, ರಾಜ್ಯ ಕೈಗಾರಿಕೆ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಂಪನಗೌಡ ಬಾದರ್ಲಿ, ಸಂಸದ ಕುಮಾರ ನಾಯಕ, ಶಾಸಕರಾದ ಡಾ.ಶಿವರಾಜ ಪಾಟೀಲ, ಹಂಪಯ್ಯ ನಾಯಕ, ವಿಧಾನ ಪರಿಷತ್ ಸದಸ್ಯ ವಸಂತಕುಮಾರ, ಮಲ್ಲಿಕಾರ್ಜುನ ಗೌಡ, ರಾಜಶೇಖರ ರಾಮಸ್ವಾಮಿ, ಪಾಮಯ್ಯ ಮುರಾರಿ, ಪವನ ಕಿಶೋರ ಪಾಟೀಲ, ಜಿಲ್ಲಾಧಿಕಾರಿ ನಿತೀಶ್ ಕೆ., ಜಿಲ್ಲಾ ಪಂಚಾಯಿತಿ ಸಿಇಒ ಈಶ್ವರಕುಮಾರ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ, ಸಾವಿತ್ರಿ ಪುರುಷೋತ್ತಮ, ಎಸ್.ಆರ್.ರೆಡ್ಡಿ, ಡಾ.ರಮೇಶ, ವಿಷ್ಣುಕಾಂತ ಭುತಡಾ ಉಪಸ್ಥಿತರಿದ್ದರು.



# ಬಳಗೇರಿ ಗ್ರಾಮದಲ್ಲಿ ಆಕಸ್ಮಿಕ ಅಗ್ನಿ ಅವಘಡ – ಕಡಲೆ ಬೆಳೆ ಸಂಪೂರ್ಣ ನಾಶ




**ನೈಜ್ಯ ದೆಸೆ ನ್ಯೂಸ್**

ಬಳಗೇರಿ ಗ್ರಾಮದ ರೈತ ರಾಮಪ್ಪ ಹೊಂಬಾಳೆ ಅವರಿಗೆ ಸೇರಿದ ಕಡಲೆ ಬೆಳೆ ಹಾಗೂ ಕಡಲೆ ಹೊಟ್ಟು ಆಕಸ್ಮಿಕವಾಗಿ ಬೆಂಕಿಗೆ ಆಹುತಿಯಾದ ಘಟನೆ ಭಾನುವಾರ ಸಂಭವಿಸಿದ್ದು, ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿದೆ. ಸುಮಾರು 4 ಎಕರೆ ವಿಸ್ತೀರ್ಣದ ಕಡಲೆ ಬೆಳೆಯಲ್ಲಿ ಬೆಳೆದಿದ್ದ ಬೆಳೆ ಸಂಪೂರ್ಣವಾಗಿ ಸುಟ್ಟುಹೋಗಿದ್ದು, ಇದರಿಂದ ರೈತ ಕುಟುಂಬ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ.ಮಾಹಿತಿಯ ಪ್ರಕಾರ, ಕಡಲೆ ಬೆಳೆಗೆ ಅಂದಾಜು 65 ಸಾವಿರ ರೂಪಾಯಿ ಹಾಗೂ ಸಂಗ್ರಹಿಸಿದ್ದ ಕಡಲೆ ಹೊಟ್ಟಿಗೆ ಸುಮಾರು 30 ಸಾವಿರ ರೂಪಾಯಿ ಮೌಲ್ಯದ ನಷ್ಟ ಸಂಭವಿಸಿದೆ. ಏಕಾಏಕಿ ಬೆಂಕಿ ವ್ಯಾಪಕವಾಗಿ ಹರಡುತ್ತಿದ್ದಂತೆ ಸುತ್ತಮುತ್ತಲ ಗ್ರಾಮಸ್ಥರಲ್ಲಿ ಭಾರೀ ಆತಂಕ ಉಂಟಾಯಿತು.ಘಟನೆಯ ಮಾಹಿತಿ ಪಡೆದ ತಕ್ಷಣವೇ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಶೀಘ್ರ ಕಾರ್ಯಾಚರಣೆ ನಡೆಸಿ ಬೆಂಕಿಂ–ಯನ್ನು ಸಂಪೂರ್ಣವಾಗಿ ಆರಿಸಿದರು. ಇದರಿಂದ ಪಕ್ಕದ ಜಮೀನುಗಳಿಗೆ ಹಾಗೂ ಮನೆಗಳಿಗೆ ಬೆಂಕಿ ಹರಡುವುದನ್ನು ತಡೆಗಟ್ಟಲು ಸಾಧ್ಯವಾಯಿತು.ಈ ಅಗ್ನಿ ಅವಘಡದ ವೇಳೆ ಬೆಂಕಿ ನಂದಿಸಲು ಪ್ರಯತ್ನಿಸುತ್ತಿದ್ದಾಗ ಗಂಗಮ್ಮ ಹೊಂಬಾಳೆ ಅವರಿಗೆ ಬಲಗೈ ಹಾಗೂ ಬಲಮುಖದಲ್ಲಿ ಗಾಯಗಳಾಗಿದ್ದು, ಅವರನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ ಎಂದು ತಿಳಿದುಬಂದಿದೆ. ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎನ್ನಲಾಗಿದೆ.ಘಟನೆಯ ಕುರಿತು ಗ್ರಾಮಸ್ಥರು ಆಡಳಿತಾಧಿಕಾರಿಗಳಿಗೆ ಮಾಹಿತಿ ನೀಡಿದ್ದು, ಸಂಬಂಧಿಸಿದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುವಂತೆ ಒತ್ತಾಯಿಸಿದ್ದಾರೆ. ರೈತ ರಾಮಪ್ಪ ಹೊಂಬಾಳೆ ಅವರಿಗೆ ಸರಕಾರದಿಂದ ಸೂಕ್ತ ಪರಿಹಾರ ಒದಗಿಸಬೇಕೆಂದು ಗ್ರಾಮಸ್ಥರು ಹಾಗೂ ರೈತ ಸಂಘಟನೆಗಳು ಆಗ್ರಹಿಸಿವೆ. ಅಕಾಲಿಕ ಅಗ್ನಿ ಅವಘಡದಿಂದಾಗಿ ವರ್ಷಪೂರ್ತಿ ಶ್ರಮಿಸಿದ ಬೆಳೆ ನಾಶವಾಗಿದ್ದು, ರೈತ ಕುಟುಂಬದ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರಿದೆ.

# ಪವಿತ್ರ ಕುಟುಂಬ ದೇವಾಲಯದಲ್ಲಿ ಚೈಲ್ಡ್ ವುಡ್ ಡೇ ಆಚರಣೆ





**ನೈಜ್ಯ ದೆಸೆ ನ್ಯೂಸ್**

ಕತ್ತೋಲಿಕ ಧರ್ಮಸಭೆಯಲ್ಲಿ ಮಕ್ಕಳ ಆತ್ಮಿಕ, ನೈತಿ–ಕ ಹಾಗೂ ಸಾಮಾಜಿಕ ಬೆಳವಣಿಗೆಯನ್ನು ವಿಶೇಷವಾಗಿ ಗುರುತಿಸುವ ಮಹತ್ವದ ದಿನವಾದ ಹೋಲಿ ಚೈಲ್ಡ್ ಹುಡ್ ಡೇ ಅಂಗವಾಗಿ, ಇಂದು ನಮ್ಮ ಪವಿತ್ರ ಕುಟುಂಬ ದೇವಾಲಯದ ವಿಚಾರಣೆಯಲ್ಲಿ ಚಿಣ್ಣರ ದಿನಾಚರಣೆಯನ್ನು ಭಕ್ತಿಭಾವದಿಂದ ಹಾಗೂ ಸಂಭ್ರಮದಿಂದ ಆಚ–ರಿಸಲಾಯಿತು. ಈ ದಿನವು ಮಕ್ಕಳನ್ನು ಯೇಸು ಕ್ರಿಸ್ತನ ಪ್ರೀತಿಯಲ್ಲಿ ಬೆಳೆಸಿ, ಪ್ರಾರ್ಥನೆ, ಸೇವೆ ಮತ್ತು ತ್ಯಾಗದ ಮೂಲಕ ಜಗತ್ತಿನ ಎಲ್ಲಾ ಮಕ್ಕಳೊಂದಿಗೆ ಏಕಾತ್ಮತೆಯನ್ನು ಬೆಳೆಸುವ ಉದ್ದೇಶವನ್ನು ಹೊಂದಿದೆ.ಈ ವಿಶೇಷ ದಿನದ ಅಂಗವಾಗಿ ದೇವಾಲಯದಲ್ಲಿ ಪರಿಶುದ್ಧ ಬಲಿ ಪೂಜೆಯನ್ನು ಅರ್ಪಿಸಿ, ಚಿಣ್ಣರಿಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ವಿಚಾರಣೆಯ ಗುರುಗಳು ಹಾಗೂ ಸಿಂಧನೂರು ವಲಯದ ಶ್ರೇಷ್ಠ ಗುರುಗಳಾದ ರೆಬೆರೆಂಡ್ ಫಾದರ್ ಜ್ಞಾನ ಪ್ರಕಾಶ್ ಅವರು ಪೂಜೆಯನ್ನು ನೆರವೇರಿಸಿ, ಹೋಲಿ ಚೈಲ್ಡ್ ವುಡ್ ಮಹತ್ವವನ್ನು ಮಕ್ಕಳಿಗೂ ಪಾಲಕರಿಗೂ ವಿವ–ರಿಸಿದರು. ಮಕ್ಕಳಲ್ಲಿ ಪ್ರಾರ್ಥನೆಯ ಅಭ್ಯಾಸ, ದೇವರ ಪ್ರೀತಿ, ಸಹಾನುಭೂತಿ ಹಾಗೂ ಸೇವಾ ಮನೋಭಾವ ಬೆಳೆಸುವಲ್ಲಿ ಈ ಚಳವಳಿಯ ಪಾತ್ರ ಅಪಾರವಾದುದು ಎಂದು ಅವರು ತಮ್ಮ ಸಂದೇಶದಲ್ಲಿ ತಿಳಿಸಿದರು.ಕಾರ್ಯಕ್ರಮದಲ್ಲಿ ಪಾಲನ ಸಮಿತಿಯ ಗೌರವಾನ್ವಿತ ಸದಸ್ಯರುಗಳು, ವಿಚಾರಣೆಯ ಭಕ್ತರುಗಳು ಹಾಗೂ ವಿಚಾರಣೆಗೆ ಸೇರಿದ ಎಲ್ಲಾ ಕುಟುಂಬಗಳ ಚಿಣ್ಣರು ಅಂದರೆ ಪುಟ್ಟ ಮಕ್ಕಳು ಭಕ್ತಿಯಿಂದ ಭಾಗವಹಿಸಿದರು. ಮಕ್ಕಳು ಸ್ವತಃ ಪ್ರಾಥ–ರ್ನೆಗಳಲ್ಲಿ ಭಾಗಿಯಾಗಿ, ಜಗತ್ತಿನ ವಿವಿಧ ಭಾಗಗಳಲ್ಲಿ ಇರುವ ಮಕ್ಕಳ ಸುಖಶಾಂತಿ, ಆರೋಗ್ಯ, ಶಿಕ್ಷಣ ಹಾಗೂ ಭವಿಷ್ಯಕ್ಕಾಗಿ ದೇವರಲ್ಲಿ ಪ್ರಾರ್ಥಿಸಿದರು. ಇದು ಮಕ್ಕಳಲ್ಲಿ ವಿಶ್ವಭ್ರಾತೃತ್ವದ ಮನೋಭಾವವನ್ನು ಬೆಳೆಸುವ ಅಥ–ರ್ಪೂರ್ಣ ಕ್ಷಣವಾಯಿತು.ಪೂಜೆಯ ಸಂದರ್ಭದಲ್ಲಿ ಮಕ್ಕಳ ಆರೋಗ್ಯಕರ ಮತ್ತು ಉಜ್ವಲ ಭವಿಷ್ಯಕ್ಕಾಗಿ, ಅವರ ಶೈಕ್ಷಣಿಕ, ಮಾನಸಿಕ ಹಾಗೂ ಆತ್ಮಿಕ ಬೆಳವಣಿಗೆಗಾಗಿ ದೇವರ ಆಶೀರ್ವಾದವನ್ನು ಕೋರಲಾಯಿತು. ಜೊತೆಗೆ ಮಕ್ಕಳನ್ನು ಪ್ರೀತಿ, ಶಿಸ್ತು ಹಾಗೂ ನೈತಿಕ ಮೌಲ್ಯಗಳಲ್ಲಿ ಬೆಳೆಸುತ್ತಿರುವ ತಂದೆ–ತಾಯಿಗಳಿಗಾಗಿ ವಿಶೇಷವಾಗಿ ಪ್ರಾರ್ಥನೆ ಸಲ್ಲಿಸಿ, ದೇವರ ಪ್ರೀತಿಗೆ ಕೃತಜ್ಞತೆ ಅರ್ಪಿಸಿ ಬಲಿ ಅರ್ಪಿಸಲಾಯಿತು. ಕುಟುಂಬವೇ ಮಕ್ಕಳ ಪ್ರಾಥಮಿಕ ಧಾರ್ಮಿಕ ಪಾಠಶಾಲೆಯಾಗಿರುವುದನ್ನು ಈ ಸಂದರ್ಭ ನೆನಪಿಸಲಾಯಿತು.ಹೋಲಿ ಚೈಲ್ಡ್ ಹುಡ್ ಡೇ ಆಚ–ರಣೆಯು ಮಕ್ಕಳ ಮಹತ್ವವನ್ನು ಸಮಾಜಕ್ಕೆ ತಿಳಿಸುವುದರ ಜೊತೆಗೆ, ಚರ್ಚಿನ ಭವಿಷ್ಯ ಮಕ್ಕಳ ಕೈಯಲ್ಲಿದೆ ಎಂಬ ಸಂದೇಶವನ್ನು ಬಲವಾಗಿ ಪ್ರತಿಪಾದಿಸಿತು. ಮಕ್ಕಳಲ್ಲಿ ದೇವರ ವಾಕ್ಯಕ್ಕೆ ವಿಧೇಯತೆ, ಪ್ರಾರ್ಥನೆಗೆ ಆಸಕ್ತಿ, ಸೇವೆಗೆ ತಯಾರಿ ಹಾಗೂ ಮಾನವೀಯ ಮೌಲ್ಯಗಳ ಬೆಳವಣಿಗೆಗೆ ಇದು ಪ್ರೇರಣೆಯಾಯಿತು.ಈ ವಿಶೇಷ ಆಚರಣೆ ಭಕ್ತಿಭಾವ, ಸಂತೋಷ, ಆತ್ಮೀಯತೆ ಮತ್ತು ಧಾರ್ಮಿಕ ಉತ್ಸಾಹದಿಂದ ಯಶಸ್ವಿಯಾಗಿ ನೆರವೇರಿತು. ಪವಿತ್ರಕುಟುಂಬ ದೇವಾಲಯದ ವಿಚಾರಣೆಯಲ್ಲಿ ನಡೆದ ಈ ಚಿಣ್ಣರ ದಿನಾಚರಣೆ, ಮಕ್ಕಳ ಜೀವನದಲ್ಲಿ ದೇವರ ಪ್ರೀತಿಯ ಅನುಭವವನ್ನು ಮತ್ತಷ್ಟು ಗಟ್ಟಿಗೊಳಿಸಿದ ಸ್ಮರಣೀಯ ಕಾರ್ಯಕ್ರಮವಾಗಿ ಉಳಿಯಿತು.

